ಸದನವು ಪುನ: 3.25 ನಿಮಿಷಕ್ಕೆ ಪ್ರಾರಂಭವಾಯಿತು.

(ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್‌ರವರು ಪೀಠವನ್ನಾಲಂಕರಿಸಿದರು)

5 ಶಾಸನ ರಚನಾ ಕಾರ್ಯಕಲಾಪಗಳು

(ಅ) ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 1997 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇವೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಕೇವಲ ಎರಡು ತಾಂತ್ರಿಕವಾದಂಥ ತಿದ್ದುಪಡಿಗಳನ್ನು ನಾನು ತರುತ್ತಿದ್ದೇನೆ. ಒಂದನೆಯದು ಪ್ರಥಮ ಬಾರಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳು ಆಗುವಾಗ ವಿಭಾಗಾಧಿಕಾರಿಗಳು ತಾಲ್ಲೂಕು ಪಂಚಾಯ್ತಿಗಳಿಗೆ ಸಂಬಂಧಿಸಿದಂತೆ ಅಲ್ಲಿಯ ಆಯುಕ್ತರು ಈ ಚುನಾವಣೆಗಳನ್ನು ನಡೆಸಬೇಕು. ಪುನರ್ ನಿರ್ಮಾಣ ಮಾಡಿದಾಗ ಅಥವಾ ಮುಂದುವರಿದ ಸಭೆಗಳಲ್ಲಿ ಅಲ್ಲಿ ಇರುವಂಥ ಸದಸ್ಯರೆ ಅಥವಾ ಅಧ್ಯಕ್ಷರೆ ಚುನಾವಣೆಗಳನ್ನು ನಡೆಸಬೇಕು ಎಂದು ಕಾನೂನಿನ ಇಂಗಿತ ಇದೆ. ಶ್ರೇಷ್ಠ ನ್ಯಾಯಾಲಯದ ತೀರ್ಪು ಬಂದಂಥ ಹಿನ್ನಲೆಯಲ್ಲಿ ಅವರ ಇಪ್ಪತ್ತು ತಿಂಗಳ ಅವಧಿ ಮುಗಿದು ಹೋಗಿರುವ ಕಾರಣ ಇವೋತ್ತು ಅವರು ಅಧ್ಯಕ್ಷರಾಗಿ ಉಳಿದಿಲ್ಲ. ಆದಕಾರಣ ಅವರು ಅಧ್ಯಕ್ಷರಾಗಿ ಈ ಚುನಾವಣೆಗಳನ್ನು ನಡೆಸತಕ್ಕಂಥ ಅಧಿಕಾರ ಅವರಲ್ಲಿ ಉಳಿದಿಲ್ಲ. ಅಲ್ಲಿರುವಂಥ ಸದಸ್ಯರಲ್ಲಿ ಓರ್ವರನ್ನು ಆಯ್ಕೆ ಮಾಡಿ ಆ ದಿವಸದ ನಡವಳಿಕೆಗಳಿಗೆ ಸಂಬಂಧಿಸಿದಂತೆ ಅವರು ಈ ಚುನಾವಣೆಗಳನ್ನು ನಡೆಸುವಂಥ ಪ್ರಕ್ರಿಯೆ ಆಗಿದ್ದರೆ ಅವರಲ್ಲಿ ಕೂಡ ಸ್ವಲ್ಪ ಮಟ್ಟಿಗೆ ತೊಂದರೆ ಬರಬಹುದು. ಏಕೆಂದರೆ ಆವರೇ ಅಧ್ಯಕ್ಷರಾಗಬೇಕು ಅಥವಾ ಉಪಾಧ್ಯಕ್ಷರಾಗಬೇಕೆಂದು ಬಯಸಿರಬಹುದು ಅಥವಾ ಅವರು ಬೇರೆ ತರಹವಾದ ದೃಷ್ಟಿಕೋನವನ್ನು ಇಟ್ಟುಕೊಳ್ಳಬಹುದು ಎನ್ನುವ ಕಾರಣಕ್ಕಾಗಿ ಮುಂದುವರಿದ ಸಭೆ ಅಥವಾ ಪುನರ್ ರಚಿಸಲ್ಪಟ್ಟಂಥ ಈ ಮಂಡಳಿಗಳಿಗೆ ಅಥವಾ ಜಿಲ್ಲಾಪಂಚಾಯ್ತಿಗಳಿಗೆ ವಿಭಾಗಾಧಿಕಾರಿ ಮತ್ತು ಆಯುಕ್ತರನ್ನು ಚುನಾವಣಾಧಿಕಾರಿಯನ್ನಾಗಿ ಮಾಡಬೇಕು ಎನ್ನುವ ಒಂದು ಸಣ್ಣ ತಿದ್ದುಪಡಿ ಇದೆ. ಎರಡನೇಯದು ಅಧ್ಯಕ್ಷರು ಅವರು ಯಾವುದೇ ಕಾರಣಗಳಿಗಾಗಿ ಅವರು ರಾಜೀನಾಮೆ ಕೊಟ್ಟರಲಿ ಅಥವಾ ಆಯ್ಕೆಯಾಗಿರತಕ್ಕಂಥ ಸಂಬಂಧ ಅಥವಾ ಅವರು ಗತಿಸಿದರೆ ಇಂತಹ ಸಂದರ್ಭಗಳಲ್ಲು ಎಲ್ಲದರಲ್ಲಿಯೂ ಕೂಡ ಉಪಾಧ್ಯಕ್ಷರಿಗೆ ಸಂಪೂರ್ಣವಾದಂಥ

ಅಧಿಕಾರವನ್ನು ಕೊಟ್ಟಿಲ್ಲ. ನಾವೆಲ್ಲ ಭಾವಿಸಿದಂತೆ ಉಪಾಧ್ಯಕ್ಷರು ಅಧ್ಯಕ್ಷರ ಗೈರು ಹಾಜರಿಯಲ್ಲಿ ಅವರ ಕರ್ತವ್ಯಗಳನ್ನು ವಹಿಸಬೇಕಾದಂಥದ್ದು ಸಹಜವೂ ಮತ್ತು ಆಪೇಕ್ಷಣೆಯವೂ ಆಗಿದೆ. ಆದರೆ ಈ ಕಾನೂನಿನ ಅಡಿಯಲ್ಲಿ ಆ ಸಭಾ ನಡವಳಿಕೆಗಳನ್ನು ಮಾಡಿಕೊಡಲಿಕ್ಕೆ ಮಾತ್ರ ಅವರಿಗೆ ಅಧಿಕಾರ ಇದೆಯೇ ವಿನಹ ಅವರು ಅಧ್ಯಕ್ಷರ ಅಧಿಕಾರವನ್ನು ನಿರ್ವಹಿಸುವಂಥದಿಲ್ಲ. ಇದನ್ನು ನಾವು ಬೆಂಗಳೂರು ಗ್ರಾಮಾಂತರ ಜಿಲ್ಲಾಪಂಚಾಯತ್ ಸಂದರ್ಭದಲ್ಲಿ, ಮಾನ್ಯ ವೆಂಕಟಾಚಲಯ್ಯನವರು ಅಧ್ಯಕ್ಷರಾಗಿ ಆಯ್ಕೆ ಆದಂಥ ಸಂದರ್ಭದಲ್ಲಿ ಉಪಾಧ್ಯಕ್ಷರಿಗೆ ಆ ಅಧಿಕಾರ ಇಲ್ಲ ಎನ್ನುವುದು ಕಂಡು ಬರುವುದರಿಂದ ಈ ಎರಡು ತಿದ್ದುಪಡಿಗಳನ್ನು ನಾನು ಈ ಸದನದ ಮೂಲಕ ಪ್ರಸ್ತಾಪ ಮಾಡುವ ಪ್ರಯತ್ನ ಮಾಡಿದ್ದೇನೆ. ಇದರಲ್ಲಿ ಯಾವುದೇ ತರಹದ ಹಣಕಾಸಿನ ಹೊರೆಯಾಗಿಲ್ಲ, ಇದು ತಾಂತ್ರಿಕವಾಗಿರತಕ್ಕಂಥದ್ದು. ಆದ್ದರಿಂದ ಇದನ್ನು ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಮೂರು ತಿದ್ದುಪಡಿಗಳು ಚಿಕ್ಕದು ಇದೆ. ಸೆಕ್ಷನ್ 141, 153 ಮತ್ತು 180 ಆದರೆ ಇದರ ರಿಫರ್‌ಕೇಷನ್ ಬೇರೆ ರೀತಿಯಿಂದ ಆಗುತ್ತದೆ ಎನ್ನತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಹೇಗೆ ಎಂದು ತಾವು ಕೇಳಬಹುದು. ಈ ರೋಸ್ಟರ್ ಪದ್ಧತಿ ಬಂದ ಮೇಲೆ ಜಿಲ್ಲಾ ಅಧ್ಯಕ್ಷರ ಮತ್ತು ಗ್ರಾಮಪಂಚಾಯ್ತಿನಲ್ಲಾಗಲಿ, ತಾಲ್ಲೂಕು ಪಂಚಾಯತ್‌ಗಳಾಲ್ಲಾಗಲಿ, ಜಿಲ್ಲಾ ಪಂಚಾಯತ್‌ಗಳಲ್ಲಾಗಲಿ ಎಲೆಕ್ಷನ್ ಕಂಡಕ್ಟ್ ಮಾಡುವಾಗ ನಾವು ಒಬ್ಬ ರಿಟರ್ನಿಂಗ್ ಆಫೀಸರನ್ನು ನೇಮಕ ಮಾಡಬೇಕು ಎಂದು ನಿಮ್ಮ ಮೊದಲನೆಯ ತಿದ್ದುಪಡಿಯಲ್ಲಿದೆ. ಈಗ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಟೈಮ್ ಮುಗಿದುಹೋಗಿದೆ ಆದಕಾರಣ ಹೊಸ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನು ನೇಮಕಾತಿ ಮಾಡಬೇಕಾಗಿದೆ. ಆದರೆ ತಾವು ಏನು ಪದ್ಧತಿಯನ್ನು ಅನುಸರಿಸಿದ್ದೀರಿ. ರೋಸ್ಟರ್ ಎಂದಾಗ ತಾವೇನು ಒಂದರಿಂದ ನೂರು ಪಾಯಿಂಟ್ ಇಟ್ಟುಕೊಂಡು ಇದು ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಹೋಗಬೇಕು, ಇದು ಜನರಲ್‌ಗೆ ಹೋಗಬೇಕು, ಇದು ಬ್ಯಾಕ್ವರ್ಡ್‌ಕ್ಲಾಸ್‌ಗೆ ಹೋಗಬೇಕು ಎಂದು ಮಾಡಿದ್ದೀರಿ ಅಥವಾ ಪಾಪ್ಯುಲೇಶನ್ ಆಧಾರದ ಮೇಲೆ ಇಲ್ಲಿ B.C. ಆಗಬೇಕು, ಇಲ್ಲಿ S.C. ಆಗಬೇಕು ಎಂದು ಮಾಡಿದ್ದೀರಿ ಅಥವಾ ಇನ್‌ಡಿಸಕ್ರಿಮಿನೇಟ್‌ಲಿ ಅಂದರೆ ಎಲ್ಲಿ ಇಚ್ಛೆ ಬಂದಂತೆ ಅಥವಾ ಪಕ್ಷಕ್ಕೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ ಎನ್ನತಕ್ಕಂಥದ್ದು ಬರುತ್ತಿದೆ, ಏಕೆಂದರೆ ಇನ್ನು ಲಿಸ್ಟ ಹೊರಗೆ ಬಂದಿಲ್ಲ. ಆದು ಬಂದ ಮೇಲೆ ನಮ್ಮ ಹಣೆಬರಹಗಳು ಗೊತ್ತಾಗುತ್ತವೆ ನಾವು ಎಲ್ಲೆಲ್ಲಿ ಇದ್ದೇವೆ, ನಾವು ಯಾವ ಯಾವ ಸ್ಥಾನದಲ್ಲಿದ್ದೇವೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ.

ಅಧ್ಯಕ್ಷರು:– ಅವರು ಮಾಡಬಹುದು ಏನೋ ಎಂದು ತಮಗೆ ಅನುಮಾನ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅನುಮಾನ ಏಕೆ ಎಂದರೆ ತಮಗೆ ಗೊತ್ತಿದೆ ಹೋದಸಾರಿ ಇದೇ ಸದನದಲ್ಲಿ ನಮ್ಮ ಅಫಜಲ್‌ಪುರ್ ನಾಯಕರು, ಗುತ್ತೇದಾರ್‌ರವರು ಜೀವರ್ಗಿಯಿಂದ ಅಫಜಲ್‌ಪುರಕ್ಕೆ ಚೇಂಜ್ ಮಾಡಿಸಿದ್ದಾರೆ. ಇದು ಆದಂಥ ಘಟನೆ. ಆನೇಕಸಾರಿ ಇಂತಹ ಆ ಅಚಾತುರ್ಯ ಘಟನೆಗಳು ನಡೆಯುತ್ತವೆ. ಅದಕ್ಕೆ ಏನಾದರೂ ಒಂದು ಪ್ರಿನ್ಸಿಪಲ್ ಬೇಕಲ್ಲ

ಅಧ್ಯಕ್ಷರು:- ಎಷ್ಟು ಇಂಬ್ರೆಸಿಂಗ್ ಆಗಿ ಇರುತ್ತದೆ ಎಂದರೆ ನನ್ನ ಕ್ಷೇತ್ರದಲ್ಲಿ ನನ್ನ ಊರು ಸುತ್ತ ನನ್ನ ಹಳ್ಳಿ ಸುತ್ತ ಎರಡು ಹೋಬಳಿಯಲ್ಲಿ ಹೆಚ್ಚು ನಮಗೆ ಜನ ಬೆಂಬಲ ಇರತಕ್ಕಂಥದ್ದು. ಅಲ್ಲಿ 11 ಪಂಚಾಯ್ತಿ ಬರುತ್ತವೆ. ಮೂರು ಜಿಲ್ಲಾಪಂಚಾಯ್ತಿ ಬರುತ್ತವೆ. ಅಲ್ಲಿ ಯಾರೂ ನನ್ನ ಜೊತೆ ಇರುವುದಿಲ್ಲ. ಅಂದರೆ ಅದು ಅವರು ಮಾಡಿದ್ದಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದು ಯಾರು ಇದ್ದರೂ ಕೂಡ ಮಾಡಬಾರದು ಎಂದು ಹೇಳುತ್ತಿದ್ದೇನೆ. ಅದೂ ಇರಬಹುದು. ಅಕ್ಕಪಕ್ಕದಲ್ಲಿ ಎಲ್ಲೆಲ್ಲಿ ಸ್ಟ್ರಾಂಗ್ ಹೋಲ್ಡ್ ಇರುವ ಕಥೆಯಲ್ಲೆಲ್ಲಾ ಮಹಿಳೆಯರ ಬೆಂಬಲ ಇವರಿಗೆ ಎಷ್ಟಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಇದಲ್ಲದೆ ನ್ಯಾಚುರಲೀ ಶೇಕಡ 33ರಷ್ಟು ಮೀಸಲಾತಿ ಏಸು ಇದೆ ಅದನ್ನು ಯಾರೂ ಅಲ್ಲಿ ಕೇಳುವುದಿಲ್ಲ. ಏಕೆಂದರೆ ಅಕ್ಕಪಕ್ಕದಲ್ಲಿಲ್ಲಾ ಮಹಿಳೆಯರೇ ಇರುತ್ತಾರೆ. ಆದರೆ ಕೆಲವು ಸಲ ಏನಾಗುತ್ತದೆಂದರೆ in the absence of principles and guiding rules.ಅಥವಾ ಯಾವುದೇ ಒಂದು ಮಾರ್ಗಸೂಚಿ ಇಲ್ಲದೇ ಇದ್ದಾಗ ಮಿಸ್ ಅಪ್ಲಿಕೇಷನ್ ಆಗತಕ್ಕಂಥ ಅಥವಾ ಮಿಸ್‌ಯೂಸ್ ಆಗತಕ್ಕಂಥ ಸಾಧ್ಯತೆಗಳು ಇವೆ. ಇದಕ್ಕಾಗಿ ತಾವು ನಿಶ್ಚಯವಾಗಿ ಇದರ ಬಗ್ಗೆ ಏನು ಒಂದು ಮಾರ್ಗಸೂಚಿ ಕೊಟ್ಟಿದ್ದೀರಿ ಅಥವಾ ಎಲೆಕ್ಷನ್ ಕಮಿಶನರ್ ಅಥವಾ ನೀವು ಅಪಾಯಿಂಟ್ ಮಾಡಿದಂಥ ಎಲೆಕ್ಷನ್ ಕಮಿಶನರ್‌ರವರು ನೇರವಾಗಿ ಮಾಡುತ್ತಾರೋ ಅಥವಾ ಇಲ್ಲಿಂದ ಸೂಚನೆ ಹೋಗುತ್ತದೋ ಅಥವಾ ಸೆಕ್ರೆಟರಿಯೇಟ್‌ನಿಂದಲೇ ತಾವು ಸೂಚನೆ ಮಾಡುತ್ತೀರೋ ಎಂಬ ಬಗ್ಗೆ ತಿಳಿಸಬೇಕು. ಏಕೆಂದರೆ ಇದರ ಬಗ್ಗೆ ಎಲ್ಲಾ ಸದಸ್ಯರುಗಳು ಬಹಳ ಆತುರರಾಗಿದ್ದಾರೆ. ಅವರೆಲ್ಲರಿಗೂ ಕೂಡ ಗೊತ್ತಾಗಬೇಕಾಗಿದೆ. ಎಲ್ಲಿ ಮಹಿಳೆಯರಿಗೆ ಸ್ಥಾನ ಹೋಗುತ್ತದೆ, ಎಲ್ಲಿ ರಿಸರ್ವ್‌ಗೆ ಹೋಗುತ್ತದೆ, ಎಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಹೋಗುತ್ತದೆ ಎಂದು ಅವರು ತಿಳಿದುಕೊಳ್ಳಬೇಕಾಗಿದೆ. ಇದಕ್ಕಾಗಿ ಒಂದು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಅಮೆಂಡ್‌ಮೆಂಟ್ ಬಂದಮೇಲೆ ರೂಲ್ಸ್ ಮಾಡಿಯೇ ಮಾಡುತ್ತೀರಿ. ಈ ರೂಲ್ಸ್‌ಗಾಗಿ.

ಶ್ರೀ ಎಂ.ಪಿ.ಪ್ರಕಾಶ್:- ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಸಂಬಂಧವಿಲ್ಲ ಎಂದು ಹೇಳುವುದು ಸರಿಯಲ್ಲ. ಅಧ್ಯಕ್ಷರನ್ನೇ ರಿಟರ್ನಿಂಗ್ ಆಫೀಸರ್‌ನ್ನಾಗಿ ತಾವು ಮಾಡುವಾಗ ನ್ಯಾಚುರಲಿ ಎಲೆಕ್ಷನ್ ಎಂದು ಹೇಳಿದಾಗ ಇವೆಲ್ಲಾ ವಿಷಯಗಳು ಬರುತ್ತವೆ. ಅದಕ್ಕಾಗಿ ಇದಕ್ಕೆ ಒಂದು ಸ್ಪಷ್ಟವಾಗಿ ತಿಳಿವಳಿಕೆಯನ್ನು ಕೊಡತಕ್ಕಂಥ ಅವಶ್ಯಕತೆ ಇದೆ. ಇದರ ಬಗ್ಗೆ ತಾವು ಮಾಹಿತಿಯನ್ನು ಕೊಡಬೇಕೆಂದು ಕೇಳುತ್ತೇನೆ. ಇನ್ನು ಎರಡನೆಯದಾಗಿ to enable Upa Adhaykasha of jilla Panchayats, to exercise powers of Adhyaksha when the office of the Adhyaksha is vacant,. ಇದು ಕೆಲವು ಸಲ ಏನಾಗುತ್ತದೆಂದರೆ ಕೆಲವು ಕಡೆ ಇದು ಒಂದು ಸಮದ್ದೇಶದಿಂದ ಈ ಅಮೆಂಡ್‌ಮೆಂಟ್ ತಂದರೂ ಕೂಡ ಅಥವಾ ಸರ್ಕಮ್‌ಸ್ಟೆನ್ಸ್‌ಸ್ ಡಿಫಿಕಲ್ಟೀಸ್ ನೋಡಿ ಆ ಒಂದು ಡಿಫಿಕಲ್ಟೀಸ್ ತೆಗೆದುಹಾಕಬೇಕೆನ್ನುವ ದೃಷ್ಟಿಯಿಂದ ತಾವು ತಂದರೂ ಕೂಡ ಕೆಲವು ಸಲ ಮಿಸ್ ಯೂಸ್ ಹೇಗಾಗುತ್ತದೆಂದರೆ ಅನೇಕ ಸಾರಿ ಇದೇ

ಸದನದಲ್ಲಿ ಇದರ ಬಗ್ಗೆ ಮಾತನಾಡಿದ್ದೇವೆ. ಅನೇಕಲ್ ಕ್ಷೇತ್ರದಲ್ಲಿ ಏನಾಯಿತು ಎಂಬುದು ತಮಗೆ ಗೊತ್ತಿದೆ. ಒಬ್ಬ ಎಸ್. ಸಿ. ಮಹಿಳೆ ಅಧ್ಯಕ್ಷರಾಗಿದ್ದಾರೆ ಎಂದು ಹೇಳಿದರೆ ಅದೊಂದೇ ಕಾರಣಕ್ಕಾಗಿ ಅವಳ ಅಧ್ಯಕ್ಷತೆ ಕೆಳಗಡೆ ಮೀಟಿಂಗ್ ನಡೆಸಬಾರದು ಎಂದು ಹೇಳಿ ಕೊನೆಯವರೆಗೂ ಮೀಟಿಂಗ್ ಸೇರಲಿಲ್ಲ. ಏಕೆಂದರೆ ಯಾವುದೋ ಒಂದು ಕಾರಣದಿಂದ ಅವಳ ಅಧ್ಯಕ್ಷತೆಯಲ್ಲಿ ಮೀಟಿಂಗ್ ಸೇರಬಾರದು ಎಂದು ಈ ರೀತಿ ಮಾಡುತ್ತಾರೆ. ಈ ರೀತಿಯಲ್ಲಿ ಅನೇಕ ಕಡೆ ತಾಲ್ಲೂಕು ಪಂಚಾಯತಿಗಳಲ್ಲಿ ಏನು ಹೆಣ್ಣು ಮಕ್ಕಳು ಎಸ್.ಸಿ.ಯವರು ಬಂದಿದ್ದಾರೋ ಅಂಥ ಕಡೆ ಏನು ಮಾಡುತ್ತಾರೆಂದರೆ ಕೊನೆಗೆ ಇನ್‌ವಿಟಬಲ್ ಸರ್ಕಮೆಸ್ಟ್ಯಾನ್ಸ್‌ಸೆ ತಂದಿಡುವುದು, ಆ ರೀತಿ ಸರ್ಕಮೆಸ್ಟೆನ್ಸ್‌ಸ್ ತಂದಿಟ್ಟು ಅವಳಿಗೋ: ಅವನಿಗೋ ರಿಸಿಗ್‌ನೇಶನ್ ಕೊಡಿ ಎಂದು ಹೇಳಿ ರಿಸಿಗ್‌ನೇಶನ್ ಕೊಡಿಸಿ ಉಪಾಧ್ಯಕ್ಷ ಪವರ್‌ಫುಲ್ ಇದ್ದರೆ ಅಥವಾ ಬೇಕಾದಂಥವನು ಇದ್ದರೆ ಅವನನ್ನೇ ಮುಂದುವರಿಸಿಕೊಂಡು ಹೋಗುವುದು ನಡೆದಿದೆ. ಉದಾಹರಣೆಗೆ ಗುಲ್ಬರ್ಗಾದಲ್ಲಿ ಯಾವಾಗ ಹೆಚ್ಚಿನ ಶಕ್ತಿ ಉಪಾಧ್ಯಕ್ಷನಿಗೆ ಸಿಗುತ್ತದೆ ಎನ್ನತಕ್ಕಂಥದ್ದು ಹೇಳುವುದಾದರೆ ನಾನು ಇದರ ಮೆರಿಟ್ ಮತ್ತು ಡಿಮೆರಿಟ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇಡೀ ನಮ್ಮ ಸಂಸ್ಥೆಯನ್ನು ತೆಗೆದುಕೊಂಡಾಗ ಮೆರಿಟ್ ಮತ್ತು ಡಿಮೆರಿಟ್ ಬಗ್ಗೆ ಹೇಳುವುದಕ್ಕೆ ಆಗುವುದಿಲ್ಲ. ಒಂದು ಇಂಡಿಜ್ಯುಯಲ್ ಕೇಸ್ ಬಗ್ಗೆ ತೆಗೆದುಕೊಂಡಾಗ ಮೆರಿಟ್ ಮತ್ತು ಡಿಮೆರಿಟ್ ಬಗ್ಗೆ ಹೇಳಬಹುದು. ಆದರೆ ಇಂಥ ಕೇಸ್‌ಗಳಲ್ಲಿ ಯಾವ ಯಾವ ವಿಚಾರಗಳಲ್ಲಿ ಅಧ್ಯಕ್ಷ ಬಹಳ ವೀಕ್ ಆಗಿರುತ್ತಾನೋ ಅಂಥ ಸಮಯದಲ್ಲಿ ಎಲ್ಲಾ ಸದಸ್ಯರು ಫೋರ್ಸ್ ಮಾಡಿ ಅವನಿಗೆ ರೆಸಿಗ್ನೇಷನ್ ಕೊಡಿಸಿ, ಅವನ ಕೈಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಅವನನ್ನು ತೆಗೆಸತಕ್ಕಂಥ ಸಾಧ್ಯತೆ ಇದೆ. ಆಗ ಉಪಾಧ್ಯಕ್ಷ ಆ ಸ್ಥಾನದಲ್ಲಿ ಕೂತಿರುತ್ತಾರೆ. ಅಂಥ ಸಂದರ್ಭದಲ್ಲಿ ಅತ ಎಷ್ಟು ದಿವಸ ಆ ರೀತಿಯಲ್ಲಿ ಕುಳಿತಿರಬೇಕು,? ಎಷ್ಟು ದಿವಸ ಅತ ಹಾಗೇ ಕೆಲಸ ಮಾಡಬಹುದು, ಎಷ್ಟು ದಿವಸದಲ್ಲಿ ಚುನಾವಣೆ ಆಗಬೇಕು ಎಂಬ ಬಗ್ಗೆ ನೀವು ಒಂದು ನಿರ್ದಿಷ್ಟವಾದ ಪೀರಿಯೆಡ್ ಫಿಕ್ಸ್ ಮಾಡದಿದ್ದರೆ ಬರೇ ಆ್ಯಕ್ಟಿಂಗ್ ಪ್ರೆಸಿಡೆಂಟ್ ಒಂದೆರಡು ವರ್ಷಗಳಾದರೂ ಅವನೇ ಕೆಲಸ ಮಾಡುತ್ತಿರುತ್ತಾನೆ ಕೊನೆಗೆ 5 ವರ್ಷಗಳನ್ನೂ ಪೂರೈಸಬಹುದು. ಈ ರೀತಿಯಾದರೆ ಜಿಲ್ಲಾ ಪರಿಷತ್ ಅವಧಿಯನ್ನೇ ಅವರಿಗೆ ಇಟ್ಟಂತೆ ಆಗುತ್ತದೆ. ಆದುದರಿಂದ ದಯವಿಟ್ಟು ಪೀರಿಯಡ್‌ನ್ನು ಫಿಕ್ಸ್ ಮಾಡಬೇಕು, ಒಂದು 30 ದಿವಸವನ್ನೋ, 20 ದಿವಸದಲ್ಲೋ ಟೆಂಪರ್ವರಿ ಅಧ್ಯಕ್ಷರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿರುತ್ತೀರಿ. ಈ ಸಂಭವಗಳು ಅನೇಕವಿರಬಹುದು, ಅಧ್ಯಕ್ಷ ಹೊರಗಡೆ ಹೋದಾಗ, ಅಥವಾ ತೀರಿಕೊಂಡಾಗ ಅಥವಾ ಇನ್ನಿತರ ಯಾವುದೇ ಒಂದು ಸಂದರ್ಭದಲ್ಲಿ ಈ ರೀತಿ ಉಪಾಧ್ಯಕ್ಷ ಅಧ್ಯಕ್ಷರಾಗಿ ಕೆಲಸ ಮಾಡಬಹುದು. ಆದರೆ ಇದಕ್ಕೆ ಒಂದು ಸ್ಪೆಸಿಫಿಕ್ ಟೈಮ್ ಫಿಕ್ಸ್ ಮಾಡದೇ ಹೋದರೆ ಇದರ ಬಗ್ಗೆ ಬರೇ ತಿದ್ದುಪಡಿ ತರುವುದರಿಂದ ಪ್ರಯೋಜನ ಆಗುವುದಿಲ್ಲ. ಇದನ್ನು ಬಹಳ ಜನ ಮಿಸ್‌ಯೂಸ್ ಮಾಡುತ್ತಾರೆ. ಇರತಕ್ಕಂಥ ಅಧ್ಯಕ್ಷರಿಗೆ ಯಾವ ರೋಸ್ಟರ್ ಪದ್ಧತಿಯಿಂದ, ಯಾವ ಸಾಮಾಜಿಕ ನ್ಯಾಯ ಕೊಡಬೇಕೆಂದು ಹೇಳಿ ತಾವು ಬಡವರಿಗೆ, ಹಿಂದುಳಿದ ವರ್ಗದವರಿಗೆ, ಮಹಿಳೆಯರಿಗೆ ಇದರಲ್ಲಿ ಸೇರಿಸಿದ್ದೀರಿ ಅವರ ಹಕ್ಕನ್ನು ಮೊಟಕುಗೊಳಿಸತಕ್ಕಂಥ ಪ್ರಯತ್ನ ಈ ಎರಡನೇ ತಿದ್ದುಪಡಿಯಿಂದ ಆಗುವ ಸಂಭವವಿದೆ. ಅದಕ್ಕಾಗಿ ಇದಕ್ಕೆ ತಾವು ಟೈಮ್‌ನ್ನು ಫಿಕ್ಸ್ ಮಾಡಬೇಕು. ಆ ಟೈಮ್ ಲಿಮಿಟ್‌ನಲ್ಲಿ ಚುನಾವಣೆ ಆಗಬೇಕು. ಒಂದು ವೇಳೆ ಚುನಾವಣೆ ಆಗದಿದ್ದರೆ ನೀವು ಅಸಿಸ್ಟೆಂಟ್

ಕಮೀಶನರ್‌ರವರಿಗೆ ನೇರವಾಗಿ ಆ ಅಧಿಕಾರವನ್ನು ಕೊಟ್ಟು ಅವರೇ ನಡೆಸಬೇಕೆಂದು ಮಾಡಿ, ಅವರಿಗೂ ಕೂಡ 10-15 ದಿವಸಗಳಲ್ಲಿ ಚುನಾವಣೆ ಕಂಡಕ್ಟ್ ಮಾಡಬೇಕೆಂದು ನಿರ್ದೇಶನ ಕೊಡದೇ ಹೋದರೆ ಈ ಒಂದು ತಿದ್ದುಪಡಿ ಕೂಡ ಮಿಸ್‌ಯೂಸ್ ಆಗುತ್ತದೆ ಅಥವಾ ಮಿಸ್ ಅಪ್ಲಿಕೇಶ್‌ನ್ ಆಗುತ್ತದೆ ಎನ್ನತಕ್ಕಂಥ ಮಾತನ್ನು ಇವೊತ್ತು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದಕ್ಕಾಗಿ ಬಹಳ ಜನ ಕಾತುರದಿಂದ ಈ ತಿದ್ದುಪಡಿ ಬಗ್ಗೆ ತಿಳಿದುಕೊಳ್ಳಲು ಕುಳಿತಿದ್ದಾರೆ. ನಮಗೆ ಇದರಲ್ಲಿ ಲಾಭ ಆಗುತ್ತದೇನೋ, ನಮಗೆ ಇದರಲ್ಲಿ ಲಾಭ ಆಗುತ್ತದೇನೋ ಎಂದು ತಿಳಿದುಕೊಳ್ಳಲು ಕುಳಿತಿದ್ದಾರೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ಕೂಡ ತಾವು ಎಕ್ಸ್‌ಪ್ಲನೇಟರಿ ನೋಟ್ಸ್‌ನಲ್ಲೂ ಏನೂ ಹೇಳಲಿಲ್ಲ. ಫೈನಾನ್ಸಿಯಲ್ ಮೆಮೊರಾಂಡಮ್‌ನಲ್ಲೇನೋ ಇದರ ಖರ್ಚು ಹೆಚ್ಚು ಬರುವುದಿಲ್ಲ, ಪರವಾಗಿಲ್ಲ ಎಂದು ಹೇಳಿದ್ದೀರಿ, ಅದರೆ ಉಪಾಧ್ಯಕ್ಷನಾದವರು ಅಧ್ಯಕ್ಷನಾದ ಮೇಲೆ ಅಧ್ಯಕ್ಷರಿಗೆ ಏನು ಖರ್ಚು ಬರುತ್ತಿತ್ತೋ ಅದೇ ಖರ್ಚು ಇವರಿಗೂ ಬರುತ್ತದೆ, ಆ ಮಾತು ಬೇರೆ ಆದರೆ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಇದರ ಬಗ್ಗೆ ಕೊಟ್ಟಿದ್ದೀರೇನೋ ಎಂದರೆ ಏನೂ ಹೇಳಲಿಲ್ಲ. ಬಿಲ್‌ನಲ್ಲಿ ಕೂಡ ಏನೂ ಹೇಳಿಲ್ಲ. ದಯವಿಟ್ಟು ಇದರ ಬಗ್ಗೆ ತಾವು ಎಕ್ಸ್‌ಪ್ಲನೇಶನ್ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಇನ್ನು ಮೂರನೆಯದಾಗಿ when Upaadhayksha of of Taluk Panchayat and Zilla Panchayat preside over the meeting of Tuluk Panchayat when the office of the Adhyaksha is vacant the same arguement holds good for this also. ಇದರಲ್ಲಿ ಎರಡನೆಯದು ಮತ್ತು ಮೂರನೆಯದು ಸಿಮಿಲಾರಿಟಿಸ್ ಇದೆ. ಎರಡನೆಯದಕ್ಕೆ ಏನು ಆರ್ಗ್ಯುಮೆಂಟ್ ಇದೆಯೋ ಅದೇ ಇದಕ್ಕೂ ಇದೆ. ಅದಕ್ಕಾಗಿ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಬೇಕು, ಡೈರಕ್ಷನ್ಸ್ ಕೊಡಬೇಕು, ಗೈಡ್‌ಲೈನ್ಸ್ ಕೊಡಬೇಕು ಮತ್ತು ಮಾರ್ಗಸೂಚಿ ಕೊಡಬೇಕು. ಇದರ ಬಗ್ಗೆ ರೂಲ್ಸ್ ಕೊಡಬೇಕಾದ ಅವಶ್ಯಕತೆ ಇದೆ. ರೋಸ್ಟರ್ ಯಾವ ರೀತಿ ಮಾಡಿಕೊಡಬೇಕು ಎಂದು ಹೇಳಬೇಕು. ಏಕೆಂದರೆ ಇವೆಲ್ಲಾ ಕಾನೂನು ಶಾಶ್ವತವಾಗಿ ರತಕ್ಕಂಥವುಗಳು. ಅನೇಕ ಸಾರಿ ಮಿನಿಸ್ಟರ್ ಪೋರ್ಟ್‌ಫೋಲಿಯೋ ಬದಲಾವಣೆ ಆದಾಗ ಇಂಥವುಗಳನ್ನು ನೋಡುವುದಕ್ಕೆ ಕೆಲವರಿಗೆ ಪುರುಸೊತ್ತು ಇರುವುದಿಲ್ಲ. ಸುಮ್ಮನೇ ಬಂದು ರುಜು ಹಾಕಬಹುದು. ಅದಕ್ಕಾಗಿ ಬಹಳ ದಿವಸಗಳ ಕಾಲ ಈ ಕಾನೂನುಗಳು ಇರುವುದರಿಂದ ಮತ್ತು ಪ್ರಜಾಪ್ರಭುತ್ವದಲ್ಲಿ ಇದು ಜೀವಂತವಿರುವುದರಿಂದ ತಾವು ರೂಲ್ಸ್ ಮಾಡತಕ್ಕಂಥದ್ದು, ಗೈಡಲೈನ್ಸ್ ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತೇನೆ. ತಾವು ಇದರ ಬಗ್ಗೆ ಒಂದು ತಿಳಿವಳಿಕೆಯನ್ನು ಕೊಡುತ್ತೀರೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ರಾಮಕೃಷ್ಣ (ಅನೇಕಲ್):- ಮಾನ್ಯ ಸಭಾಪತಿಗಳೇ, ಈ ತಿದ್ದುಪಡಿ ತಂದಿರತಕ್ಕಂಥದ್ದರಲ್ಲಿ ಫೈನಾನ್ಸಿಯಲ್ ಮೆಮೊರಾಂಡಮ್‌ನಲ್ಲಿ not involving any financial implication,. ಎಂದು ಹೇಳಿ ಸರ್ಕಾರಕ್ಕೆ ಏನು ಆಗುವುದಿಲ್ಲ ಎಂದು ಹೇಳಲಾಗಿದೆ. ಆದರೆ ಕರ್ನಾಟಕ ರಾಜ್ಯದ ಎಲ್ಲಾ ಕಡೆ ಎಷ್ಟೆಷ್ಟು ಹಣ ಖರ್ಚಾಗುತ್ತದೆ, ಇದು ಇಂಪ್ಲಿಮೆಂಟ್ ಆಗಬೇಕಾದರೆ ಲಕ್ಷಗಟ್ಟಲೆ ಕೋಟಿಗಟ್ಟಲೇ ಆಗಬಹುದು. ಇದರ ಅವಶ್ಯಕತೆ ಏನಿತ್ತು ಎಂದು ನಾನು ಕೇಳುತ್ತೇನೆ. ಈ ಅಮೆಂಡ್‌ಮೆಂಡಿನ ಉದ್ದೇಶ ಏನು? ಇದು ಬರೇ ರಾಜಕೀಯ

ದೃಷ್ಟಿಯಿಂದ, ದುರುದ್ದೇಶದಿಂದ ಕೂಡಿರತಕ್ಕಂಥ ಅಮೆಂಡ್‌ಮೆಂಟ್ ಆಗಿದೆ. ತನ್ನ ಪಾರ್ಟಿಯನ್ನು ಬೆಳೆಸಲಿಕ್ಕೆ, ತನ್ನ ಪಾರ್ಟಿಯವರನ್ನೇ ಅಧ್ಯಕ್ಷರನ್ನಾಗಿ ಉಪಾಧ್ಯಕ್ಷರನ್ನಾಗಿ ತರಬಹುದು, ಅದಕ್ಕೋಸ್ಕರ ಅಧಿಕಾರವನ್ನು ಮೊಟಕು ಮಾಡಿದಂತೆ ಕಾಣುತ್ತದೆ, ಮಾನ್ಯ ಅಧ್ಯಕ್ಷರೇ, ನಾನು ಹೈ ಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ ಪ್ರಶ್ನೆ ಮಾಡವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಇದನ್ನು ತಂದಂಥ ಮೋಟಿವ್‌ನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಈ ಅಮೆಂಡ್‌ಮೆಂಟ್‌ನ್ನೂ ತಂದು ತನ್ನ ಪಾರ್ಟಿಯ ಬಲವನ್ನು ಹೆಚ್ಚು ಮಾಡುವುದಕ್ಕೆ ಈ ಅಮೆಂಡ್‌ಮೆಂಟ್ ತಂದಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ತಮ್ಮನ್ನು ಕೇಳುತ್ತೇನೆ, ನೀವು ಒಂದು ಕಮಿಟಿ ಮಾಡಿ. ನಾನು ಅನೇಕ ಸಲ ಪದೆಪದೇ ಹೇಳುತ್ತಿದ್ದೇನೆ. ಸಮಗ್ರವಾದಂತಹ ತಿದ್ದುಪಡಿ ತಂದುಬಿಡಿ. ನೀವು ತರತಕ್ಕಂಥ ತಿದ್ದುಪಡಿ ಎಂಥಾದ್ದು ಎಂದರೆ ಈಗ ನಾಯಕ್ ರೆಕಮೆಂಡೇಷನ್ ಈಗಾಗಲೇ ಸರ್ಕಾರಕ್ಕೆ ತಲುಪಿದೆ. ನಾನು ಅನೇಕ ಸಲ ಕೇಳುತ್ತಿದ್ದೇನೆ, ಏನೇನು ರೆಕಮೆಂಡೇಷನ್‌ನ್ನು ಅವರು ಮಾಡಿದ್ದಾರೆ. ದಯವಿಟ್ಟು ಸದನದಲ್ಲಿ ತಿಳಿಸಿ. ಅಥವಾ ನೀವು ಸಮಗ್ರವಾದಂತಹ ತಿದ್ದುಪಡಿ ತಂದುಬಿಡಿ. ನಾವು ಒಂದೇಸಲ ಇದನ್ನು ಆಕ್ಸ್‌ಫ್ಟ್ ಮಾಡಿಕೊಳ್ಳೋಣ ಎಂದು ಹೇಳುತ್ತಿದ್ದೇನೆ. ಹಾಗೆ ಮಾಡುವುದಿಲ್ಲ. ತಮಗೆ ಅವತ್ತಿನ ಮಟ್ಟಿಗೆ ಯಾವ ಅಮೆಂಡ್‌ಮೆಂಟ್ ಅವಶ್ಯಕತೆ ಇದೆ ಎಂದು ಅವರ ಪಾರ್ಟಿಗೆ ಗೊತ್ತಾಗುತ್ತದೋ ಅವತ್ತಿನ ದಿವಸ ಅಂತಹ ಅಮೆಂಡ್‌ಮೆಂಟ್ ಒಂದನ್ನು ತಂದು ಮುಂದೆ ಇಟ್ಟು ಮೆಜಾರಿಟಿ ಇದ್ದೇವೆ ಎಂದು ಪಾಸ್ ಮಾಡಿಕೊಳ್ಳುತ್ತಾರೆ. ಇದು ನ್ಯಾಯವೇ ಎಂದು ನಾನು ಕೇಳುತ್ತಿದ್ದೇನೆ. ಇವತ್ತು ನಾನು ಮಂತ್ರಿಗಳಿಗೆ ಕೇಳುತ್ತಿದ್ದೇನೆ, ನಾಯಕ್ ಕಮಿಟಿ ರೆಕಮೆಂಡೇಷನ್ ವಿಚಾರದಲ್ಲಿ ಏನಾದರೂ ಬಂದಿದೆಯಾ ಅಥವಾ ಅವರಿಗೆ ನೀವು ಏನಾದರೂ ರೆಫರ್ ಮಾಡಿದ್ದೀರಾ? 20 ತಿಂಗಳ ಅವಧಿಯ ವಿಚಾರದಲ್ಲಿ ಏನಾದರೂ ರೆಕಮೆಂಡೇಷನ್ ಕೇಳಿದ್ದೀರಾ? ಇಲ್ಲ, ಅವರಿಂದ ಉತ್ತರ ಬಂದಿದೆಯಾ? ಅಥವಾ ಈಗಾಗಲೇ ಕಳುಹಿಸಿರತಕ್ಕಂಥ ರೆಕಮೆಂಡೇಷನ್‌ಲ್ಲಿ ಏನಾದರೂ ಅಡಕವಾಗಿತ್ತೇ, ದಯವಿಟ್ಟು ಆ ವಿಚಾರವನ್ನು ತಾವು ತಿಳಿಸಬೇಕು. ಇದು ನೋಡುವುದಕ್ಕೆ ಬಹಳ ಸಿಂಪಲ್ ಆಗಿದೆ. ಆದರೆ ಇದರ ಆಳ ನೋಡಿದಾಗ ಬರೀ ರಾಜಕೀಯ, ರಾಜಕೀಯ. ಈಗ ಏನು ಹೇಳಿದರು ಡಿವಿಜನಲ್ ಕಮಿಷನರ್ ಡಿ.ಸಿ. ಆಫೀಸ್‌ನಲ್ಲಿ ಕುಳಿತು ಕೊಳ್ಳುತ್ತಾರೆ; ಜಿಲ್ಲಾಪರಿಷತ್ತಿನಲ್ಲಿ ಅಸಿಸ್ಟೆಂಟ್ ಕಮಿಷನರ್ ಬರುತ್ತಾರೆ, ಇಲ್ಲಿ ಕುಳಿತು ಕೊಳ್ಳುತ್ತಾರೆ, ನಿಜ. ಆದರೆ ಅವರು ಎಂತಹವನನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ಮಾಡುವವರು ಯಾರು? ಅದು ಬಹಳ ಮುಖ್ಯ ನಮಗೆ ಗೊತ್ತಾಗಬೇಕಲ್ಲಾ. This has diverted the issue,. ಅದನ್ನು ಸಿಕ್ರೇಟ್ ಆಗಿ ಇಟ್ಟುಕೊಂಡು ಬೆಡುತ್ತೀರಿ. ಆದರೆ ಆ.ಡಿ.ಸಿ.ಯವರು ಮತ್ತೊಬ್ಬರನ್ನು ಕರೆಸಿಬಿಟ್ಟು ತಮಗೆ ಇಷ್ಟ ಬಂದವರನ್ನು ಆಯ್ಕೆ ಮಾಡಿಸುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ನ್ಯಾಯವೇ? It should be transparent. ಜನರಿಗೆ ಎಲ್ಲಾ ಗೊತ್ತಾಗಬೇಕು. ಪಂಚಾಯತ್ ಆಕ್ಟ್ ಮಾಡಿದ ಉದ್ದೇಶವೇನು ಅದನ್ನು ಈಡೇರಿಸುತ್ತಿದ್ದೀರಾ? ಬರೀ ರಾಜಕೀಯ ಬೇಳಕಾಳು ಬೇಯಿಸುವುದಕ್ಕೆ ಉಪಯೋಗಿಸಿ ಕೊಳ್ಳುತ್ತಿದ್ದೀರಿ ಪಂಚಾಯತ್ ಉದ್ಧಾರವಾಗಬೇಕು ಎಂದು ಇದನ್ನು ನೀವು ಮಾಡುತ್ತಿಲ್ಲ, ನೀವು ಮಾಡುವ ಹಾಗೆ ಇದ್ದಿದ್ದರೆ ದಯವಿಟ್ಟು ಹೇಳಿ 175 ತಾಲ್ಲೂಕುಗಳಲ್ಲಾ ಇಂತಿಂತಹ ಕೆಟಗರಿಯಲ್ಲಿ ಇಂತಿಂಹದ್ದು ಮಾಡಿದ್ದೇವೆ, ಇಲ್ಲಿ ಬರುತ್ತದೆ, ಎಲೆಕ್ಟ್ ಮಾಡುತ್ತಾರೆ. ಸ್ವಾಮಿ ಎಲ್ಲಿ ಹರಿಜನರು ಸಿಗುವುದಿಲ್ಲವೋ ಅಲ್ಲಿ ಹರಿಜನರಿಗೆ ಮೀಸಲಾಗಿಡುತ್ತೀರಾ?

ಅಧ್ಯಕ್ಷರು:- ಹರಿಜನರು ಎಂದತಕ್ಷಣ ಜ್ಞಾಪಕ ಬಂತು. ಇವತ್ತು ಒಂದು ಪತ್ರ ಬಂದಿದೆ.

ಶ್ರೀ ವೈ. ರಾಮಕೃಷ್ಣ:- ನಾನು ಹೇಳುತ್ತಿದ್ದೇನೆ, ಈಗ ಅರ್ಹತೆ ಇರತಕ್ಕಂಥವರು ಎಂದು ಹೇಳಿದೆ. ಅರ್ಹತೆ ಎಲ್ಲಿ ಇದ್ದಾರೆ ಅಲ್ಲೆ ಏಕೆ ಮಾಡುವುದಿಲ್ಲ ಅಥವಾ ಬೇಡ, ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಅಲ್ಲಿ ಏಕೆ ಮಾಡುವುದಿಲ್ಲ.? ಏಲ್ಲಿ ಗೆಲ್ಲುವುದಕ್ಕೆ ಸಾಧ್ಯವಿಲ್ಲವೋ ಅಂತಹ ಕಡೆ ಏನು ಮಾಡುತ್ತೀರಿ, ಮಹಿಳೆಯರನ್ನು ಹಾಕುತ್ತೀರಿ, ಎಸ್‌ಸಿ ಕಾಸ್ಟ್ ಮಹಿಳೆಯರಿಗೆ ಹಾಕುತ್ತೀರಿ, ಇಲ್ಲ 'ಎ' ಗ್ರೂಪ್‌ಗೆ ಹಾಕುತ್ತೀರಿ. ಏನೆಂದರೆ ಇದು ಬರೀ ರಾಜಕೀಯ. ನೋಡುವುದಕ್ಕೆ ರಾಜಕೀಯ ಎನ್ನುವ ವರ್ಡ್ ಎಲ್ಲೂ ಇಲ್ಲ. ಸ್ವಾಮಿ ಎಟು ಜೆಡ್ ಬರೀ ರಾಜಕೀಯ. ಹೌದು ನಾನು ಹೇಳುತ್ತೇನೆ, ಇದರ ಒಳಗೆ ರಾಜಕೀಯ ಇದೆ.

ಅಧ್ಯಕ್ಷರು:- ರಾಮಕೃಷ್ಣರವರೇ, ಇದು ಬಹಳ ಸಿಂಪಲ್ ಇದೆ. ತಾವು ಹೀಗೆ.

ಶ್ರೀ ವೈ.ರಾಮಕೃಷ್ಣ:- ನೋಡುವುದಕ್ಕೆ ಸಿಂಪಲ್ ಇದೆ, ಸ್ವಾಮಿ ನಾವು ಅನುಭವಿಸಿದ್ದೇವೆ. ಈಗಾಗಲೇ ನಾವು ಪೂರ್ತಿಯಾಗಿ ಅನುಭವಿಸಿಬಿಟ್ಟಿದ್ದೇವೆ.

ಅಧ್ಯಕ್ಷರು:- ಸರ್ಕಾರದವರು ಒಂದು ತೀರ್ಮಾನ ಮಾಡಿದ್ದಾರೆ. 20 ತಿಂಗಳು ಒಬ್ಬ ಅಧ್ಯಕ್ಷ ಉಪಾಧ್ಯಕ್ಷರಿಗೆ ಅಧಿಕಾರಾವಧಿ ಎಂದು ಮಾಡಿದ್ದಾರೆ. ಆ 20 ತಿಂಗಳು ಮುಗಿದಿದೆ. ಕೆಲವರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ. ಅವರ ಅಧಿಕಾರಾವಧಿ ಮುಗಿದು ಹೋಗಿರುವುದರಿಂದ ಮತ್ತೆ ನೂತನವಾಗಿ ಆಯ್ಕೆಯಾಗಬೇಕಾದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಯಾರು ಅಧ್ಯಕ್ಷ ಸ್ಥಾನ ವಹಿಸಿ ಆ ಚುನಾವಣೆ ನಡೆಸಬೇಕು ಎನ್ನುವುದು ಅಷ್ಟೇ ಆ ಅಮೆಂಡ್‌ಮೆಂಟ್‌ನಲ್ಲಿ ಸೀಮಿತವಾಗಿರುವುದು.

ಶ್ರೀ ವೈ. ರಾಮಕೃಷ್ಣ:- ಅದೇ ನಾನು ಹೇಳುವುದು, ಒಪ್ಪಿಕೊಂಡೆ, ನೋಡುವುದಕ್ಕೆ ಅಷ್ಟೇ ಸಿಂಪಲ್ಸ್ ಆಗಿದೆ.

MR.SPEAKER:- What I say is, this proposed amendment is only confined to that aspect. The other matter which you have raised and also the Hon'ble Leader of the Opposition, that you are always at liberty to mention. ಏಕೆಂದರೆ ಅದನ್ನು ಮೊದಲೇ ನೋಟಿಫೈ ಮಾಡಿ, ಯಾವ ಕೆಟಾಗರಿಗೆ ಮಾಡುತ್ತೀರಿ, ಅದಕ್ಕೆ ರ್‍ಯಾಷನಲ್ ಏನು, ಅದಕ್ಕೆ ಏನಾದರೂ ಯಾರ್ಡ್‌ಸ್ಟಿಕ್ ಇದೆಯೇ, That is not part of this amendment..

ಶ್ರೀ ವೈ. ರಾಮಕೃಷ್ಣ:- ಈಗಿರತಕ್ಕಂಥ ಆಕ್ಟ್‌ಗಳಿಗೆ ಒಂದು ಎಲೆಕ್ಷನ್ ನಡೆಸಿದಿರಲ್ಲಾ ಎಷ್ಟು ಸ್ಥಾನಗಳು ಖಾಲಿ ಇತ್ತು ಎಂದು ಅವರಿಗೆ ಗೊತ್ತಿದೆ. ಅವರ ಹತ್ತಿರ ಲಿಸ್ಟ್ ಇದೆ.

ಅಧ್ಯಕ್ಷರು:- ಅಧ್ಯಕ್ಷರು, ಉಪಾಧ್ಯಕ್ಷರ ಸ್ಥಾನಕ್ಕಾ?

ಶ್ರೀ ವೈ. ರಾಮಕೃಷ್ಣ:- ಅಧ್ಯಕ್ಷರು, ಉಪಾಧ್ಯಕ್ಷರ ಸ್ಥಾನಕ್ಕಲ್ಲ, ಸದಸ್ಯರ ಸ್ಥಾನಕ್ಕೆ. ನಾನು ಕೇಳಿದ್ದೇನೆ, ಆ ಪ್ರಶ್ನೆಗೆ ನನಗೆ ಉತ್ತರ ಕೊಡಬೇಕು. 55 ಸ್ಥಾನ ಖಾಲಿ ಇದೆ. ನನಗೆ ಅವರು ಕೊಟ್ಟಿದ್ದಾರೆ.

ಪ್ರಶ್ನೆಯಾಗಿ ಮಾಡುತ್ತೀರಾ, ಸರ್ಕಾರದ ನಿರ್ಧಾರ ಮಾಡುತ್ತೀರಾ, ಈಗಾಗಲೇ ಸಿದ್ದರಾಮಯ್ಯನವರು ಹೇಳುತ್ತಿದ್ದಾರೆ ಏನೆಂದರೆ, ಸರ್ಕಾರಿ ನೌಕರರಲ್ಲಿ ಶೇಕಡ 5 ಭಾಗವನ್ನು ನಾವು ಕಡಿಮೆ ಮಾಡುತ್ತೇವೆ ಎಂದು. ಅನೇಕ ಕಡೆಗಳಲ್ಲಿ ಹೇಳಿಬಿಟ್ಟಿದ್ದಾರೆ. ಇದು ಪತ್ರಿಕೆಗಳಲ್ಲಿ ಬಂದಿರುವಂಥದ್ದು. ಆ ರೀತಿ ಕಡಿಮೆ ಮಾಡುವುದನ್ನು ಯಾವರೀತಿ ಕಡಿಮೆ ಮಾಡುತ್ತೀರಿ? ಹೇಗೆ ಕಡಿಮೆ ಮಾಡುತ್ತೀರಿ, ಎಲ್ಲಾ ಕಡೆಯು ಕಡಿಮೆ ಮಾಡುತ್ತೇವೆಂದು ಹೇಳಿಬಿಟ್ಟಿದ್ದೀರಿ. ಕಡಿಮೆ ಮಾಡತಕ್ಕಂಥದ್ದಕ್ಕೆ ನಿರ್ಧಾರಗಳು ಏನು? ಅದಕ್ಕೆ ಆಧಾರಗಳು ಯಾವುವು? ಸೂತ್ರಗಳು ಯಾವುವು ಅದನ್ನು ತಾವು ಹೇಳಬೇಕಾಗುತ್ತದೆ. ಅದರಲ್ಲಿ ಇದು ಬರುತ್ತದೆಯೊ ಹೇಗೆ ಎಂಬತಕ್ಕಂಥದ್ದನ್ನು ತಮ್ಮ ಮೂಲಕ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈಗಲೂ ತಾವು ಅಸಿಸ್ಟೆಂಟ್ ಕಮಿಷನರ್‌ರನ್ನು ತೆಗೆದು ಶಾಸಕರನ್ನು ಹಾಕಿದರೆ ಸಂತೋಷ ನಾವು ಅಧ್ಯಕ್ಷತೆ ವಹಿಸುವುದಕ್ಕೆ ಇಲ್ಲ ನೀವು ಬೇರೆ ಯಾರಾದರು ಅಧಿಕಾರಿಯೇತರರನ್ನು ತಾವು ಹಾಕಬಹುದು. ಆದ್ದರಿಂದ ಒಂದು ಅವಕಾಶ ಇದೆ ದಯವಿಟ್ಟು ನಿಮ್ಮ ಕಾಲದಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸಿ ಒಂದು ತಾಲ್ಲೂಕು ಪಂಚಾಯಿತಿಯ ಜವಾಬ್ದಾರಿಯ ಸ್ಥಾನವನ್ನು ಕೊಡತಕ್ಕಂಥ ಆ ಸಂದರ್ಭವನ್ನು ತಾವು ಮಾಡಬಾರದೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುವಂಥದ್ದು, ಅಧ್ಯಕ್ಷರನ್ನು ಆಯ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ಅದರಲ್ಲಿ ಇರತಕ್ಕಂಥ ಹಿರಿಯ ಸದಸ್ಯರನ್ನು ಏಕೆಂದರೆ ಅಧಿಕಾರಿಗಳು ವಹಿಸತಕ್ಕಂಥದ್ದು ಅಷ್ಟು ಸೂಕ್ತ ಅಲ್ಲ, ಹಿರಿಯ ಸದಸ್ಯರು, ವಯಸ್ಸಿನಲ್ಲಾದರೂ ಹಿರಿಯರಾಗಿರಬಹುದು, ಅಥವಾ 2-3 ಸಲ ಆಯ್ಕೆಯಾಗಿರತಕ್ಕವರೂ ಆಗಿರಬಹುದು. ಏಕೆಂದರೆ ಈಗ ತಾಲ್ಲೂಕು ಪಂಚಾಯಿತಿಯಲ್ಲಿ ಎಲ್ಲಾ ಹೆಚ್ಚಿನ ಮಂದಿ ಹೊಸಬರೇ ಇರುವುದರಿಂದ ವಯಸ್ಸಿನಲ್ಲಿ ಹಿರಿಯರಾಗಿರತಕ್ಕಂಥ ಯಾರಾದರು ಒಬ್ಬ ಸದಸ್ಯರು ಅಲ್ಲಿ ಅಧ್ಯಕ್ಷತೆ ವಹಿಸತಕ್ಕಂಥದ್ದು ಸೂಕ್ತ ಎಂಬುದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೆ, ಈಗ ತಂದಿರತಕ್ಕಂಥ ತಿದ್ದುಪಡಿಯನ್ನು ಹೆಚ್ಚು ಕಡಿಮೆ ಸರ್ಕಾರದವರು ಒಂದು ಮುಂಜಾಗರೂಕತೆ ಕ್ರಮದಿಂದ ತಂದಿದ್ದಾರೆ ಎಂಬುದು ನನ್ನ ಭಾವನೆ. ಈಗಾಗಲೇ ಸಬ್ಸಿಕ್ವೆಂಟ್ ಮೀಟಿಂಗ್‌ನಲ್ಲಿ ಇಂತಹ ವೇಕೆನ್ಸಿಸ್ ಬಂದಂಥ ಸಂದರ್ಭದಲ್ಲಿ ಯಾವರೀತಿಯಾದಂಥ ಚುನಾವಣೆ ಪ್ರಕ್ರಿಯೆ ನಡೆಯಬೇಕು ಎಂದು ಇದ್ದರೂ ಕೂಡ ಇದು ಸಮಗ್ರವಾಗಿ ಇಡೀ ರಾಜ್ಯಕ್ಕೆ ಒಂದು ರೀತಿಯಲ್ಲಿ ಆಗಬೇಕು ಎಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೀರಿ. ಅದನ್ನು ಸ್ವಾಗತಿಸುವುದೇ ಆದರೂ ಕೂಡ ಅತ್ಯಂತ ಪ್ರಾಮುಖ್ಯವಾಗಿ, ಈಗ ನೀವು ಒಂದು ಆಕ್ಟ್‌ನ್ನು ತಂದಿದ್ದೀರಿ, ಈಗ ಬೇರೆ ಬೇರೆ ಸಂದರ್ಭದಲ್ಲಿ ಅಂದರೆ ಈಗ ಯಾವುದೇ ಒಂದು ಅವಿಶ್ವಾಸ ನಿರ್ಣಯವನ್ನು ತಂದಂಥ ಸಂದರ್ಭದಲ್ಲಿ, ರಾಜೀನಾಮೆ ಕೊಟ್ಟಂಥ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿಗೆ ಸ್ಪೆಸಿಫಿಕ್ ಆಗಿ ರೂಲ್ಸನ್ನು ನೀವು ತಂದಿಲ್ಲ. ಕೆಲವು ವಿಷಯಗಳೂ ಕೂಡ ನೀವು ತಂದಿರತಕ್ಕ ಆಕ್ಟ್‌ನಲ್ಲಿ ಅಡಕವಾಗಿದ್ದಾವೆ. ಆದರೆ ರೂಲ್ಸ್‌ನಲ್ಲಿ, ನೀವು ಆಕ್ಟ್‌ನಲ್ಲಿ

ಅಡಕವಾಗಿರುವುದರಿಂದ ರೂಲ್ಸನ್ನು ತರುವುದಕ್ಕೆ ಹೋಗಿಲ್ಲ. ಬಹುಷ: ನನಗೆ ಅನಿಸುತ್ತದೆ. ಈ ಆಕ್ಟ್‌ನ್ನು ತಂದಾಗ ಒಂದು ರೂಲ್ಸ್ ಬೇಕಾಗುತ್ತದೆ. ಏಕೆಂದರೆ ಇದು ಜನಸಾಮಾನ್ಯರಿಗೆ ಸ್ಪಂದಿಸತಕ್ಕಂಥ, ವಿವೇಚನೆಗೆ ಬರತಕ್ಕಂಥ ಒಂದು ಆಕ್ಟ್ ಆಗಿರತಕ್ಕಂಥದ್ದರಿಂದ ರೂಲ್ಸ್ ಏನು ಎಂಬುದನ್ನೂ ಕೂಡ, ಅದು ಪುಸ್ತಕವನ್ನು ಪ್ರಿಂಟ್ ಮಾಡಿ ಹಂಚಬೇಕಾಗುತ್ತದೆ, ಸಪರೇಟಾಗಿ ರೂಲ್ಸ್ ತರಬೇಕಾಗುತ್ತದೆ. ನಮಗೆ ಅನೇಕ ಅನುಭವ ಆಯಿತು, ಎಷ್ಟೋ ಸಂದರ್ಭಗಳಲ್ಲಿ ನಾವು ಸೆಕ್ರೇಟರಿಯೇಟ್‌ಗಳಿಗೆ, ಡಪ್ಯೂಟಿ ಕಮಿಷನರ್ ಆಫೀಸ್‌ಗಳಿಗೆ ಅಲೆದು ರೂಲ್ಸ್ ಏನು ಎಂಬುದನ್ನು ತಿಳಿದುಕೊಳ್ಳತಕ್ಕಂಥ ಪರಿಸ್ಥಿತಿ ಬಂತು. ಅದು ಆಗದ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು ಎಂಬುದು ಒಂದು. ಮತ್ತು ಬಹಳ ಮುಖ್ಯವಾಗಿ ಈಗ ಏನಾಯಿತು ಅಂದರೆ ಮೊನ್ನೆ ಎರಡು ವರ್ಷದವರೆಗೆ ಲಿಮಿಟ್ ಮಾಡತಕ್ಕಂಥ ತೀರ್ಮಾನವನ್ನು ನೀವು ಮಾಡಿದಿರಿ, ಅದು ನಿಮ್ಮ ಅಂತರಿಕವಾದಂಥ ವಿಷಯ ನೀವು ಮಾಡಿದ್ದೀರಿ. ಆದರೆ ತದನಂತರ ಬರತಕ್ಕಂಥ,,ಆ ಚುನಾವಣೆ ಆಗುವವರೆಗೂ ಇರತಕ್ಕಂಥ ವ್ಯಾಕ್ಯೂಂ ಅನ್ನು ಯಾವರೀತಿ ಫಿಲಪ್ ಮಾಡಬೇಕು? ಬಹುಷ: ನನಗನ್ನಿಸುತ್ತದೆ ಹಿಂದೆ ಯಾರು ಅಧ್ಯಕ್ಷರು ಇದ್ದರು ಅವರು ಯಾವುದೇ ಪಕ್ಷಕ್ಕೆ ಸೇರಿದವರು ಆಗಿರಲಿ ಅವರೇ ಮುಂದುವರೆಯತಕ್ಕಂಥದ್ದು, ಮತ್ತು ಆವರಿಂದಲೇ ಇವೊತ್ತು ಚುನಾವಣೆ ನಡೆಸತಕ್ಕಂಥದ್ದು ಬೇರೆ. ಆದರೆ ಅವರಿಂದಲೇ ಇವೊತ್ತು ಅಧಿಕಾರ ಹಸ್ತಾಂತರ ಆಗತಕ್ಕಂಥ ಪದ್ಧತಿಯನ್ನು ಇಟ್ಟುಕೊಂಡಿದ್ದರೆ ಬಹುಷ: ಬಹಳ ಚೆನ್ನಾಗಿತ್ತು. ಈಗ ನೀವು ಎರಡು ವರ್ಷಕ್ಕೆ ಲಿಮಿಟ್ ಮಾಡುವುದಕ್ಕೆ ತೀರ್ಮಾನ ಮಾಡಿದಿರಿ ಆದರೆ ಏನಾಯಿತು ಎಂದರೆ ನೀವು ಮೌಖಿಕವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ, ಮುಖ್ಯ ಕಾರ್ಯದರ್ಶಿಗಳಿಗೆ ಆದೇಶವನ್ನು ಕೊಟ್ಟಂಥ ಸಂದರ್ಭದಲ್ಲಿ ಏನಾಯಿತು ಅಲ್ಲಿ ರಾಜಕೀಯವಾಗಿ ಒಂದು ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಶುರು ಮಾಡಿದರು. ಎಲ್ಲಿ ವಿರೋಧಪಕ್ಷದವರು ಅಧ್ಯಕ್ಷರಾಗಿರುವ ಸಂದರ್ಭದಲ್ಲಿ ಎಕ್ಸಿಕ್ಯೂಟಿವ್ ಆಫೀಸರ್‌ಗಳಿಗೆ ಹೇಳಿ ಇವರನ್ನು ಆಫೀಸಿಗೆ ಬಿಟ್ಟುಕೊಳ್ಳಬೇಡಿ, ಆಫೀಸಿಗೆ ಬಂದಾಗ ಬೇಗ ಹಾಕಿ, ಜೀಪ್ ಕೀ ಕೊಡಬೇಡಿ, ವೈಲ್ ಕಳುಹಿಸಬೇಡಿ ಎನ್ನತಕ್ಕಂಥದ್ದು ಆ ತರಹದ ಯಾತನೆ ಅದು ಅನುಭವಿಸಿದರಿಗೇ ಗೊತ್ತಾಗುತ್ತದೆ. ಬಹುಷ ಈ ಕಷ್ಟ: ನಿಮಗೆ ಯಾರಿಗೂ ಗೊತ್ತಿರುವುದಿಲ್ಲ, ಈ ಭಾಗದಲ್ಲಿರತಕ್ಕ ಬಹಳಷ್ಟು ಜನಕ್ಕೆ ಆ ಕಷ್ಟ ಗೊತ್ತಾಗುತ್ತದೆ. ಅದಕ್ಕೋಸ್ಕರ ನಾನು ಹೇಳುತ್ತೇನೆ, ಅದಕ್ಕೆ ಈಗಲೇ ಸೂಕ್ತ ಮಾರ್ಪಾಡು ತಂದು ಅಧಿಕಾರಿಗಳಿಂದಲೇ ಅಧಿಕಾರ ಹಸ್ತಾಂತರ ಆಗತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಬಹುಶ: ಒಳ್ಳೆಯದಾಗುತ್ತಿತ್ತು ಎಂಬ ಮಾತನ್ನು ಹೇಳಬಯಸುತ್ತೇನೆ. ಮತ್ತೊಂದು ಈಗ ರಿಸರ್ವೇಷನನ್ನು ಬದಲು ಮಾಡತಕ್ಕಂಥದ್ದು ಇದೆ. ಜಿಲ್ಲಾಪಂಚಾಯಿತಿಯ ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು ಬದಲು ಮಾಡಬೇಕಾದರೆ ಇದನ್ನ ಒಂದು ಡಿಸ್ಟ್ರಿಕ್ ಅನ್ನುಯೂನಿಟ್ ಆಗಿ ಇಟ್ಟುಕೊಳ್ಳುತ್ತೀರಿ, ತಾಲ್ಲೂಕು ಪಂಚಾಯಿತಿಯಲ್ಲಿ ಮಾಡಬೇಕಾದರೆ ಒಂದು ಜಿಲ್ಲೆಯ ವ್ಯಾಪ್ತಿಯಲ್ಲಿ ರಿಸರ್ವೇಷನ್ ವೇಂಜ್ ಮಾಡತಕ್ಕಂಥ ಸಂದರ್ಭದಲ್ಲಿ ದಯಮಾಡಿ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಿಮ್ಮ ಮೇಲೆ ಏನೇ ರಾಜಕೀಯವಾದಂಥ ಪ್ರಭಾವ ಇದ್ದರೂ ಕೂಡ ನೀವು ಒಂದು ಸ್ಥಳೀಯವಾಗಿ, ಈಗ ಉದಾಹರಣೆಗೆ ಹೇಳುವುದಾದರೆ ಒಂದು ತಾಲ್ಲೂಕಿನಲ್ಲಿ ಎಸ್.ಸಿಯವರಿಗೆ ರಿಸರ್ವೇಷನ್ ಕೊಟ್ಟಿರುತ್ತೀರಿ ಎಂದು ತಿಳಿದುಕೊಳ್ಳಿ. ಅಲ್ಲಿ ನೆಕ್ಸ್ಟ್ ಮೇಜರ್ ಕಮಿಟಿ ಇರುತ್ತದೆ. ಯಾರಿಗೆ ಪ್ರಾತಿನಿಧ್ಯ ಕೊಡಬೇಕೆಂಬ ಸಮೀಕ್ಷೆ ಮಾಡಿ.

ಶ್ರೀ ವೈ ರಾಮಕೃಷ್ಣ:- ತಾವು ಯಾವತ್ತು ಎಲೆಕ್ಷನ್ ನಡೆಸುತ್ತೀರಿ? ಎರಡನೆಯದಾಗಿ ಯಾರ್ಯಾರಿಗೆ ಯಾವ್ಯಾವ ಸ್ಥಾನ ಎನ್ನುವುದನ್ನು ನೋಟಿಫಿಕೇಷನ್‌ನಲ್ಲಿ ನೀವು ಪ್ರಕಟಿಸುತ್ತೀರಾ ಯಾವ ಆಧಾರದ ಮೇಲೆ ಮಾಡುತ್ತೀರಿ? ಪಾಪ್ಯುಲೇಷನ್ ಮೇಲೆ ಮಾಡುತ್ತೀರಾ ಅಥವಾ ಅಲ್ಲಿರತಕ್ಕಂಥ ಜನಸಂಖ್ಯೆ ಅಥವಾ ಏನಾದರೂ ಒಂದು ಪ್ರಿನ್ಸಿಪಲ್ ಇಟ್ಟುಕೊಂಡು ಮಾಡುತ್ತೀರಾ ಅಥವಾ ನಿಮ್ಮ ರಾಜಕೀಯ ಪಕ್ಷ ಬೆಳೆಸುವುದಕ್ಕೋಸ್ಕರವಾಗಿ ಹೋದಸಲ ನೀವು ಅದೇ ಮಾಡಿದ್ದು.

ಅಧ್ಯಕ್ಷರು:- ನೀವು ಇವರ ಜೊತೆ ಏನಾದರೂ ಚರ್ಚೆ ಮಾಡಿದ್ದೀರಾ?

ಶ್ರೀ ಎಂ.ಪಿ. ಪ್ರಕಾಶ್:- ಹೋದಸಲ ಚುನಾವಣೆ ಆಗುವುದಕ್ಕಿಂತ ಪೂರ್ವದಲ್ಲಿ ಇದನ್ನು ಪ್ರಕಟಣೆ ಮಾಡಿದ್ದೇವೆ. ಆ ಪ್ರಶ್ನೆ ಎಲ್ಲಿಂದ ಬರುತ್ತದೆ.? ಚುನಾವಣೆ ಆಗುವುದಕ್ಕಿಂತ ಪೂರ್ವದಲ್ಲಿ ಯಾವ್ಯಾವ ಜಿಲ್ಲೆಗಳು ಯಾವ ಕ್ಷೇತ್ರಕ್ಕೆ ಹೋಗುತ್ತದೆ ಎಂದು ಪ್ರಕಟಣೆ ಮಾಡಿರುವುದರಿಂದ ರಾಜಕೀಯ ಮಾಡುವ ಪ್ರಶ್ನೆನೇ ಇಲ್ಲ.

ಶ್ರೀ ವೈ. ರಾಮಕೃಷ್ಣ:- ಏನು ಮಾಡುತ್ತೀರಿ ನೋಡೋಣ. ರೂಲ್ಸ್‌ನ್ನೆಲ್ಲಾದಯವಿಟ್ಟು ಜಾಗ್ರತೆಯಾಗಿ ಮಾಡಿ ಸಮಗ್ರವಾದಂಥ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಆಗ ನಮಗೂ ಸಂತೋಷವಾಗುತ್ತದೆ, ನಿಮಗೂ ಸಂತೋಷವಾಗುತ್ತದೆ, ಅವರಿಗೂ ಒಂದು ಸ್ಪೆಬಿಲಿಟಿ ಬರುತ್ತದೆ. ಇಲ್ಲದಿದ್ದರೆ ನಿಮಗೆ ಬೇಕಾದಂಥ ತಿದ್ದುಪಡಿ ಆದ ತಕ್ಷಣ ಎಷ್ಟುಬೇಕೋ ಅಷ್ಟು ಮಾಡಿಕೊಂಡು ನಿಮ್ಮ ರಾಜಕೀಯದ ಆಸೆಯನ್ನು ತೀರಿಸಿಕೊಂಡು ಗ್ರಾಮ ಪಂಚಾಯಿತಿಯನ್ನು ಕೈಬಿಡುವುದಕ್ಕೆ ಹೋಗಬೇಡಿ. ಸಮಗ್ರವಾದಂಥ ತಿದ್ದುಪಡಿಯನ್ನು ಜಾಗ್ರತೆ ತೆಗೆದುಕೊಂಡು ಬನ್ನಿ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಈ ತಾಲ್ಲೂಕು ಪಂಚಾಯಿತಿ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆ ಅಥವಾ ಪುನರ್‌ರಚನೆಯ ತರುವಾಯ ಅಸಿಸ್ಟೆಂಟ್ ಕಮಿಷನರ್‌ರವರು ಗೊತ್ತುಪಡಿಸತಕ್ಕದ್ದು, ಅವರು ಅಂತಹ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕಂಥದ್ದು, ಇಷ್ಟೇ ಈ ತಿದ್ದುಪಡಿಯ ಮೂಲ ಉದ್ದೇಶ, ಪ್ರಕಾಶ್‌ರವರೇ, ಇದು ನಾನು ಅಂದುಕೊಂಡಿರುವಂಥದ್ದು. ತಾವು ಅಧಿಕಾರ ವಿಕೇಂದ್ರೀಕರಣ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಈ ರೀತಿ ವ್ಯವಸ್ಥೆ ಮಾಡಿದ್ದೀರಿ ಮತ್ತು ಅಧಿಕಾರಿಗಳ ಬಗ್ಗೆ ಜಾಸ್ತಿ ಒತ್ತನ್ನು ಕೊಡಬಾರದು ಎಂಬತಕ್ಕಂಥ ಚಿಂತನೆಯೂ ಇಲ್ಲಿ ಇದೆ. ಅಂತಹದ್ದರಲ್ಲಿ ಈ ಚುನಾವಣೆ ನಡೆಸತಕ್ಕಂಥ, ಅಧ್ಯಕ್ಷತೆ ವಹಿಸತಕ್ಕಂಥದ್ದು ಸಾಧುವೇ ಎಂಬುದು ಅತ್ಯಂತ ಪ್ರಾಮುಕ್ಯವಾಗಿರತಕ್ಕಂಥದ್ದು. ಒಬ್ಬ ಅಸಿಸ್ಟೆಂಟ್ ಕಮಿಷನರ್ ತಾಲ್ಲೂಕು ಪಂಚಾಯಿತಿಯ ಚುನಾವಣೆ ಮಾಡುವಾಗ ಅಧ್ಯಕ್ಷ ಸ್ಥಾನವನ್ನು ವಹಿಸುವಂಥದ್ದು ಸರಿಯೇ? ನನಗೆ ಅನ್ನಿಸುವುದು ಇರತಕ್ಕಂಥ ಸದಸ್ಯರಲ್ಲೆ ಯಾರು ಹಿರಿಯ ಸದಸ್ಯರು ಇರುತ್ತಾರೆ ಅವರನ್ನೇ ಅಧ್ಯಕ್ಷ ಸ್ಥಾನಕ್ಕೆ ಕೂರಿಸುವಂಥದ್ದು, ತಾವು ಹೇಳಬಹುದು, ಅವರು ಅಧ್ಯಕ್ಷತೆ ವಹಿಸಿದರೆ, ಅವರು ಅಧ್ಯಕ್ಷತೆಗೆ ಕಂಟಿಸ್ಟ್ ಮಾಡಿದರೆ ಏನು ಮಾಡಬಹುದು ಎಂದು. ಅಲ್ಲಿರತಕ್ಕ ಎಲ್ಲಾ ಸದಸ್ಯರು ಅಧ್ಯಕ್ಷತೆಗೆ ಕಂಟಿಸ್ಟ್ ಮಾಡುವುದಕ್ಕಾಗುವುದಿಲ್ಲ. ಹಾಗೂ ಒಂದು ಪಕ್ಷ ಇಪ್ಪತ್ತು ಜನರು ಸ್ಪರ್ಧೆಗೆ ಇಳಿದರು ಎಂದು ಇಟ್ಟುಕೊಳ್ಳಿ, ಒಬ್ಬ ಶಾಸಕರನ್ನ ಅಧ್ಯಕ್ಷರನ್ನಾಗಿ ಮಾಡಿ, ಆ ಕ್ಷೇತ್ರದ ಶಾಸಕರು ಅಧ್ಯಕ್ಷತೆ ವಹಿಸಿ, ಅವರ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಯಲಿ, ಅದರಲ್ಲಿ

ತಪ್ಪೇನಾಗುತ್ತದೆ? ಒಬ್ಬ ಅಸಿಸ್ಟೆಂಟ್ ಕಮಿಷನರ್‌ರವರ ಬದಲು ಶಾಸಕರನ್ನು ಮಾಡಲಿ, ಅವರು ಯಾವುದೇ ಪಕ್ಷದವರು ಆಗಿರಲಿ, ಮಾನ್ಯ ಅಧ್ಯಕ್ಷರು ಇದನ್ನು ಒಪ್ಪುತ್ತಿರಿ ಎಂದು ನನಗನಿಸುತ್ತದೆ, ಒಪ್ಪುತ್ತೀರೊ ಬಿಡುತ್ತೀರೊ ಅಂತೂ ನಾನು ನಿಮಗೆ ಮನವರಿಕೆ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಶಾಸಕರನ್ನು ಎಷ್ಟು ಕಡೆ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ನಾನು ಒಂದು ಹೇಳುತ್ತೇನೆಹ ಅಸಿಸ್ಟೆಂಟ್ ಕಮಿಷನ್‌ರನ್ನ ಅಲ್ಲಿ ತೆಗೆದುಕೊಂಡು ಆ ಚುನಾವಣೆಗೆ ಅಧ್ಯಕ್ಷತೆ ವಹಿಸತಕ್ಕಂಥ ವ್ಯವಸ್ಥೆಗಿಂತ ತಾವು ಬದಲಾವಣೆ ಮಾಡತಕ್ಕಂಥದ್ದು ಒಳ್ಳೆಯದು ಎಂಬುದು ನನ್ನ ಭಾವನೆ. ಮತ್ತು ಈ 20 ತಿಂಗಳು ಏನು ತಂದಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ ಅದಕ್ಕೆ ನಾನೇನು ವಿರೋಧ ಮಾಡುವುದಿಲ್ಲ 20 ತಿಂಗಳು ಇರಬೇಕು, ನೀವು ಅನೇಕ ವರ್ಗದವರಿಗೆ ಅವಕಾಶ ಸಿಗುವುದಿಲ್ಲ ಎನ್ನತಕ್ಕಂಥ ಉದ್ದೇಶ ಇಟ್ಟುಕೊಂಡು, ನಿಮ್ಮ ಪಾರ್ಟಿ ಇರಬಹುದು ನಮ್ಮ ಪಾರ್ಟಿ ಇರಬಹುದು ಯಾರೇ ಬಂದರೂ ಯಾವುದೋ ಒಂದು ಬೇರೆ ವರ್ಗಕ್ಕೆ ನೀವು ಅವಕಾಶ ಕೊಟ್ಟಂತಾಯಿತಲ್ಲ. ಅದು ಒಂದು ಒಳ್ಳೆಯ ಆದರ್ಶವಾದುದು. ಆದರ ಬಗ್ಗೆ ನಾನು ಏನೂ ತಕರಾರು ಮಾಡುವುದಿಲ್ಲ. ಆದರೆ ಹಾಗೆ ಮಾಡತಕ್ಕಂಥ ಕ್ರಿಯೆ ಇನ್ನೂ ನಿಮ್ಮಲ್ಲಿ ಆಗಿಯೇ ಇಲ್ಲ, ಯಾವತ್ತು ಮಾಡುತ್ತೀರಿ, ಏನು ಪ್ರಶ್ನೆ ಏನು ಎಂಬತಕ್ಕಂಥದ್ದು ಇನ್ನು ನೀವು ಮಾಡಿಲ್ಲ. ಈ ಬಗ್ಗೆ ನಾನು ತಮ್ಮ ನಿರ್ಣಯವನ್ನು ಸ್ವಾಗತಿಸುತ್ತೇನೆ, ಇದು ನಿಮ್ಮ ಪಕ್ಷದ ನಿರ್ಧಾರ ಇರಬಹುದು ಅಥವಾ ತಮ್ಮ ಸಿದ್ಧಾಂತ ಇರಬಹುದು, ಸರ್ಕಾರ ನಿರ್ಧಾರ ಇರಬಹುದು ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ 20 ತಿಂಗಳ ಕಾಲ ಅಂದತಕ್ಷಣ ನ್ಯಾಯಾಲಯಕ್ಕೆ ಕೆಲವರು ಹೋದರು, ಮತ್ತೆ ಕೆಲವರು ಹೋಗುತ್ತೇವೆ ಎಂದು ಹೇಳಿದರು ಇದು ಗೊಂದಲದಲ್ಲಿ ಸಿಕ್ಕಿದೆ, ಅನೇಕ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾಪಂಚಾಯಿತಿಗಳು. ಈ ಸಂದರ್ಭದಲ್ಲಿ ಆಡಳಿತ ಕುಸಿದುಬಿದ್ದಿದೆ. ಅದನ್ನು ಸರಿಪಡಿಸುವುದಕ್ಕೆ ತಾವು ಏನು ಮಾಡಿದ್ದೀರಿ ಎಂಬುವುದನ್ನು ತಾವು ಪ್ರಾಮಾಣಿಕವಾಗಿ ಹೇಳಬೇಕಾದದ್ದು ತಮ್ಮ ಕರ್ತವ್ಯ. ಮತ್ತು ಮೂರನೇಯದು, ಮೂಲಭೂತವಾಗಿ ನಾವು ಇಲ್ಲಿ ಅಧ್ಯಕ್ಷರ ಚುನಾವಣೆ ಮಾಡುವಾಗ ಇಲ್ಲಿ ಯಾರನ್ನು ಕೂರಿಸುತ್ತೇವೆ ಸ್ವಾಮಿ, ಯಾರು ಹಿರಿಯ ಸದಸ್ಯರಿದ್ದಾರೆ ಅವರನ್ನು. ಅದನ್ನು ಬಿಟ್ಟು ಇಲ್ಲಿ ಮುಖ್ಯಕಾರ್ಯದರ್ಶಿಯನ್ನು ಕೂರಿಸಬಹುದಲ್ಲಾ? ನೀವು ಕುಳಿತುಕೊಳ್ಳಿ ನಾವು ಮಾಡುತ್ತೇವೆ ಎಂದು ಹೇಳಿದಕ್ಕು ಆದ್ದರಿಂದ ಇದು ಸರಿಯಾದ ನೀತಿಯಲ್ಲ ಎಂಬತಕ್ಕಂಥದ್ದು. ಮತ್ತೊಂದು ಬಹಳ ಗಂಭೀರವಾಗಿ ಯೋಚನೆ ಮಾಡಿ ತಾಲ್ಲೂಕು ಪಂಚಾಯಿತಿಯಲ್ಲಿ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿ ಮತ್ತೊಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ ಇವರಿಬ್ಬರು, ಇವರಿಬ್ಬರಿಗೆ ಇರತಕ್ಕಂಥದ್ದು ಒಂದೇ ವಾಹನ. ಇದನ್ನು ಅನೇಕಸಾರಿ ತಮ್ಮ ಗಮನಕ್ಕೆ ತಂದಿದ್ದೇನೆ. ಈ ಎರಡೂ ಪೋಸ್ಟ್ ಇರಬೇಕೇ ಬೇಡವೇ ಎಂಬ ಬಗ್ಗೆ ಚಿಂತನೆಯಾಗಬೇಕಲ್ಲಾ ಇರುವಂಥ ವಿಷಯದಲ್ಲಿ ಇದನ್ನು ಮಾತನಾಡುವುದಕ್ಕೆ ಬರುವುದಿಲ್ಲ ಆದರೆ ಸ್ವಲ್ಪ ವಾಸನೆ ಹಿಡಿದುಕೊಂಡು ಬರುತ್ತಿದ್ದೇನೆ. ಈಗ ಬೇರೆ ಸಂದರ್ಭದಲ್ಲಿ ಕೇಳಬೇಕು ನಿಜ ಆದರೆ ಇಲ್ಲಿ ಮಸೂದೆಯನ್ನು ತಂದಿರುವಾಗ ಇದೇ ಸಂದರ್ಭದಲ್ಲಿ ಕೆಲವು ವಿಚಾರಗಳು ಸಂಬಂಧಪಡದೇ ಇದ್ದರೂ ಕೂಡ ಒಟ್ಟಾರೆ ಇದರ ಅರ್ಥ ಬರುವ ರೀತಿಯಲ್ಲಿ ನಾನು ಮಾತನಾಡುತ್ತಿದ್ದೇನೆಯೇ ಹೊರತು ತಾವು ಉತ್ತರವನ್ನು ಕೊಡುವಾಗ ಅದನ್ನು ಒಂದು ನೀತಿಯ

ಶ್ರೀ ಎಂ.ಪಿ. ಪ್ರಕಾಶ್:- ಇಲ್ಲಿ ಈ ವಿಚಾರದಲ್ಲಿ ಕೂಲಂಕಷವಾಗಿ ಚರ್ಚೆಯಾಗಿದೆ. ತಾವು ಈಗ ಸಭೆಯ ಗಮನಕ್ಕೆ ತಂದಂತಹ ಸಂದರ್ಭದಲ್ಲಿ ಬಹಳ ಸೀಮಿತವಾಗಿರತಕ್ಕಂಥ ವಿಷಯದಲ್ಲಿ ಇದರಲ್ಲಿ ಬರೀ ರಾಜಕೀಯ ಎಂದು ಹೇಳಿ ಇಲ್ಲದ ರಾಜಕಾರಣವನ್ನು ಸೃಷ್ಟಿ ಮಾಡುವ ಪ್ರಯತ್ನವನ್ನು ತಾವು ಮಾಡುತ್ತಿದ್ದಿರಿ. ನಾನು ನಿಮಗೆ ಉತ್ತರ ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ:- ಶ್ರೀ ಎಂ. ಪಿ. ಪ್ರಕಾಶ್ 20 ತಿಂಗಳು

ಎಂ.ಪಿ. ಪ್ರಕಾಶ್:- ನೋಡಿ ನಮ್ಮ ನಮ್ಮ ಅಂತರ್ಯ ಪಕ್ಷದ ವಿಚಾರಗಳನ್ನು ಚರ್ಚೆಮಾಡಬೇಕಾದಂತಹ ಅಗತ್ಯವಿಲ್ಲ ಅವಧಿಯನ್ನು ತಂದಿರುವುದು ನೀವು ಇವನ್ನು ಪ್ರಶ್ನೆ ಮಾಡಿ ಯಾರು ಸುಪ್ರಿಂಮ್ ಕೋಟರಿಗೆ ಹೋಗಬಾರದು

ಶ್ರೀ ವೈ. ರಾಮಕೃಷ್ಣ:- ನನಗೂ ಗೊತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್:- ಗೊತ್ತಿದ್ದರೆ ಏಕೆ ಕೇಳುತ್ತೀರಿ? ಆ ವಿಷಯ ಪ್ರಸ್ತಾಪ ಮಾಡಬೇಕಾದಂತಹ ಅಗತ್ಯ ಇಲ್ಲವಲ್ಲಾ.

ಶ್ರೀ ವೈ. ರಾಮಕೃಷ್ಣ:- ನಿಮ್ಮಿಂದ ನಾನು ಕಲಿಯಬೇಕಾ? ನಾನು ಓಪನ್ ಆಗಿ ಹೇಳುತ್ತೇನೆ,

ಶ್ರೀ ಎಂ.ಪಿ. ಪ್ರಕಾಶ್:- ತಮ್ಮಿಂದ ನಾನು ಕಲಿಯಬೇಕು. ನಾನು ಯಾರಿಂದ ಕಲಿಯಬೇಕು ಎನ್ನುವಂತಹ ಮಾತು ಏನು ಹೇಳಿದಿರಿ, ಅದು ಯಾವಾಗಲೂ ಸಹ ಕಲಿಯಲಾರದ ಮನುಷ್ಯನ ಅಭಿಪ್ರಾಯ ನಾವು ಯಾವಾಗಲೂ ಕಲಿತುಕೊಳ್ಳಬೇಕು ಎಂದುಕೊಂಡಿರುವವರ ಪೈಕಿ ಒಬ್ಬ ನಾನು.

(ಗೊಂದಲ)

ಶ್ರೀ ವೈ. ರಾಮಕೃಷ್ಣ:- ಆಯಿತು, ಕಲಿತುಕೊಳ್ಳಿ, ನಿಮಗೆ ಯಾವುದರ ಮೇಲೆ

(ಗೊಂದಲ)

ಶ್ರೀ ವೈ. ರಾಮಕೃಷ್ಣ:- ಸಮಗ್ರವಾದಂತಹ ಕಮೆಂಡ್‌ಮೆಂಟ್ ನಾಯಕ್ ಕಮಿಟಿ ಮಾಡಿದ್ದೀರಿಲ್ಲಾ, ಅದನ್ನು ಓದುವುದಕ್ಕೆ ತರಿಸಿಕೊಂಡಿದ್ದೀರಿ.

ಅಧ್ಯಕ್ಷರು:- ತಾವು ವಿಪ್ ಬಗ್ಗೆ ಕೆಲವು ಕಡೆ ಎಂದು ಕೇಳಿದಿರಿ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಅವರು ಪಾರ್ಟಿ ಒಂದು ಸಿದ್ಧಾಂತದ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಬರುತ್ತದೆ. ಪಾರ್ಟಿಯ ಸಿದ್ಧಾಂತವನ್ನು ಪಾರ್ಟಿಯ ನಿರ್ಣಯವನ್ನು ಪ್ರಶ್ನೆ ಮಾಡತಕ್ಕಂಥವರು ಯಾರಾದರೂ ಇದ್ದರ ಅವರು ಶಿಸ್ತಿನ ಕ್ರಮಕ್ಕೆ ಒಳಗಾಗುತ್ತಾರೆಂದು ಅವರ ಪಕ್ಷದವರು ತೀರ್ಮಾನ ಮಾಡುತ್ತಾರೆ. ಈಗ ನಿಮ್ಮ ಪಕ್ಷದಲ್ಲಾದರೂ ಆ ಶಿಸ್ತು ಇರಲೇಬೇಕಲ್ಲಾ. ಅಂಥಾದ್ದು ಕೊಟ್ಟಿಲ್ಲ.

ಶ್ರೀ ರಾಮಕೃಷ್ಣ:- ಯಾವ ರಾಜಕೀಯ ಪಕ್ಷದಲ್ಲಿ ಬಹುಶ: ಇಲ್ಲೀತನಕ

MR.SPEAKER:- You are advocating 1969,..

ಶ್ರೀ ವೈ. ರಾಮಕೃಷ್ಣ:- ಮಾನವನಿಗೆ ಇರತಕ್ಕಂಥ ಮೂಲಭೂತ ಹಕ್ಕನ್ನು ಮೊಟಕು ಮಾಡತಕ್ಕಂಥ

ಅಧ್ಯಕ್ಷರು:- ಆತ್ಮಸಾಕ್ಷಿಗೆ ಅನುಗುಣವಾಗಿ ಓಟು ಹಾಕುವಂತಹ ಪ್ರಸಂಗ ಈ ದೇಶ ರಾಜಕಾರಣದಲ್ಲಿ ಬಂದಾಗ

ಶ್ರೀ ವೈ. ರಾಮಕೃಷ್ಣ:- ಈಗ ಆ ಪ್ರಶ್ನೆ ಬೇಡ.

MR.SPEAKER:- You went against it. History is before us.

ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ:- ಇದು ಅಲ್ಲಿಂದ ಬರಲಿ, ಇಲ್ಲಿಂದ ಆದರೆ ನಮಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಪ್ರಕಾಶ್‌ರವರು ಈಗಾಗಲೇ ಕೆಲವು ಇದಕ್ಕೆ ಸಂಬಂಧಪಟ್ಟಂತೆ ರೆಲವೆಂಟ್ ಇರತಕ್ಕಂಥಾದ್ದನ್ನು ಹೇಳಿದರು. ಸರಿ ಸೆಕ್ಷನ್ 153 ತಾವು ಅಮೆಂಡ್‌ಮೆಂಟ್ ತಂದಿದ್ದೀರಿ.

> Upadhyaksha of the Taluk Panchayat shall exercise the powers and perfrom the duties of the Adhyaksha when the Adhyaksha is absent or on leave or he is incapacitated from functioning in the absence of Adhyaksha preside over the meeting of Taluka Panchayats.

ಇದಕ್ಕೆ ತಾವು ತರತಕ್ಕಂಥಾದ್ದು, ಹೆಚ್ಚು ಶಬ್ದ ಸೇರಿಸುವಂಥಾದ್ದು ಯಾವುದೆಂದರೆ

> After the words or is incapacitated from functioning, the words or when the office of Adhyaksha has become vacant'.

ಹೌದು, ನಮ್ಮ ಭಯ ಇಲ್ಲಿ ಏನೆಂದರೆ ಯಾವಾಗ ಇಲ್ಲಿ ವೇಕೇಟ್ ಮಾಡಿಸುತ್ತಾರೆ. ಅದಕ್ಕಾಗಿ ಇರ್ರಲವೆಂಟ್ ಇಲ್ಲ. ರಿಲವೆಂಟ್ ಏಕೆ ಎಂದರೆ ಬರೀ ಅದಕ್ಕೆ ಸಂಬಂಧಪಟ್ಟಂಥಾದ್ದಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಈ ವಿಷಯ ಈ ಸದನದಲ್ಲಿ ಪ್ರಸ್ತಾಪವಾಗಿ ಮಾನ್ಯ ಶಿವಕುಮಾರ್ ಅವರು ತಮ್ಮ ಕ್ಷೇತ್ರದ ಅನುಭವವನ್ನು ಹೇಳಿದಮೇಲೆ ಈ ತರಹ ಉಪಾಧ್ಯಕ್ಷರಗಳು ತಮ್ಮ ಅಧಿಕಾರವನ್ನು ನಿರಂತರವಾಗಿ ಚಲಾವಣೆ ಮಾಡುತ್ತಾರೆ ಎನ್ನುವ ಕಾರಣಕ್ಕೆ ತಿದ್ದುಪಡಿ ತಂದಿದ್ದೇವೆ. ಮೂರು ಬಾರಿ ಈ ತರಹ ಮಾಡಿದರೆ ಸಂಪೂರ್ಣವಾಗಿ ಅವರು ಅಧಿಕಾರವನ್ನು ಕಳೆದುಕೊಳ್ಳುತ್ತಾರೆ ಎಂದು ತಿದ್ದುಪಡಿಯನ್ನು ಈ ಸದನದಲ್ಲಿ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಆದುದರಿಂದ ಇಲ್ಲಿ ಆ ತರಹ ಮಾಡುವುದಕ್ಕೆ ಬರುವುದಿಲ್ಲ. ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಇವತ್ತು ಬಿ ಸಿ ಎಂ ಎ, ಬಿ ಸಿ ಎಂ ಬಿ, ಎಂದು ರೀತಿಯ ಅನೇಕ ಕಮಿಟಿಗಳು ಇದೆ, ಈಗ ಉದಾಹರಣೆಗೆ ಹೇಳುವುದಾದರೆ ಚಿಕ್ಕನಾಯಕನ ಹಳ್ಳಿ ಕ್ಷೇತ್ರದಲ್ಲಿ ಉಪ್ಪಾರ ಜನಾಂಗದವರು ಯಾವ ಸಂದರ್ಭದಲ್ಲೂ ಬರಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಆ ಜನಾಂಗದವರಿಗೆ ಸಹಾಯವಾಗುವಂತಹ ರೀತಿಯಲ್ಲಿ ಬಿ.ಸಿ. ಎಂ.ಎಗೆ ಇರುವಂಥಾದ್ದು ಅಥವಾ ಬಿ.ಸಿ.ಎಂ.ಬಿಯಲ್ಲಿರುವಂಥಾದೂ ಇದು ನಿಮ್ಮ ವ್ಯಾಪ್ತಿಯಲ್ಲಿ ಬರುವಂಥಾದ್ದು. ಇದರಲ್ಲಿ ನಿಮ್ಮ ಡಿಸ್‌ಕ್ರಿಮಿನೇಷನ್ ಬರುವುದರಿಂದ ಅದನ್ನೂ ಕೂಡ ತಾವು ಯೋಚನೆ ಮಾಡುವಂಥದ್ದು ಒಳ್ಳೆಯದೆಂದು ನಾನು ಹೇಳುತ್ತೇನೆ. ಈಗಾಗಲೇ ನಮ್ಮ ನಾಯಕರು ಸಲಹೆ ಮಾಡಿದ ರೀತಿಯಲ್ಲಿ ಒಂದು ರೂಲ್ಸ್ ಅಥವಾ ಪದ್ಧತಿಯನ್ನು ಅದರಲ್ಲಿ ಯಾರೂ ಹಸ್ತಕ್ಷೇಪ ಮಾಡದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಆರೋಪಕ್ಕೆ ಗುರಿಯಾಗದ ರೀತಿಯಲ್ಲಿ ಆಗುವುದಕ್ಕೆ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಇವತ್ತು ಗ್ರಾಮ ಪಂಚಾಯತ್‌ನಲ್ಲಿ ಡೆವಲ್ಯೂಪನ್ ಆಫ್ ಪವರ್ಸ್ ಏನಾಗಿದೆ ಎಂದರೆ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ಏನು ಅಧಿಕಾರವಿದೆ ಎಂಬುದು ಆಕ್ಟ್‌ನಲ್ಲಿದ್ದರೂ ಕೂಡ ನಿಜವಾಗಿಯೂ ಅಧಿಕಾರ ಹಸ್ತಾಂತರವಾಗಿಲ್ಲ, ಎಲ್ಲಾ ಅಧಿಕಾರ ಕೇಂದ್ರೀಕೃತವಾಗಿದೆ. ಜಿಲ್ಲಾಪಂಚಾಯತ್‌ನಲ್ಲಿ ಚೀಫ್ ಸೆಕ್ರೆಟರಿಯ ಕೈಯಲ್ಲಿ ಅಧ್ಯಕ್ಷರ ಅಧಿಕಾರವಿರುವಂಥಾದ್ದು ಇವತ್ತು ಯಾವುದೇ ರೀತಿಯ ಅಧಿಕಾರವಿಲ್ಲದೆ ಇರುವಂಥಾದ್ದನ್ನು ಜಿಲ್ಲಾಪಂಚಾಯತ್‌ನಲ್ಲಿ ನಾವು ನೋಡಿದ್ದೇವೆ. ಮತ್ತೊಂದು ಬಹಳ ಪ್ರಾಮುಖ್ಯವಾದಂಥಾದ್ದು ಅಸಿಸ್ಟೆಂಟ್ ಕಮೀಷನರ್ ಗ್ರೇಡ್‌ನ ಎಕ್ಸಿಕ್ಯೂಟಿವ್ ಆಫೀಸರ್‌ಗಳನ್ನು ನೀವು ಇಟ್ಟಿದ್ದೀರಿ. ಅದಕ್ಕಾಗಿ ನಾವು ಸಂತೋಷ ಪಡುತ್ತೇವೆ. ಆದರೆ ಅವರಿಗೆ ಯಾವುದೇ ರೀತಿಯಾದಂತಹ ಹಣಕಾಸಿನ ಪವರ್ ಇಲ್ಲ. ಇದು ಆಕ್ಟ್ ಪ್ರಕಾರ ಬಿ.ಡಿ.ಓ.ಗೆ ಇರುವಂಥಾದ್ದು. ಯಾವುದೇ ಊರಿಗೆ ಮತ್ತು ತಾಲ್ಲೂಕಿಗೆ ಹೋದರೂ ಅಲ್ಲಿ ಬಿ.ಡಿ.ಓ.ಗೆ ಮತ್ತು ಎಕ್ಸಿಕ್ಯೂಟಿವ್ ಆಫೀಸರ್ಸ್‌ಗಳೊಡನೆ ಜಗಳ, ಗಲಾಟೆಯಾಗುವಂಥಾದ್ದನ್ನು ನಾನು ಎಲ್ಲಾ ಸಂದರ್ಭಗಳಲ್ಲೂ ನೋಡುತ್ತಿದ್ದೇವೆ. ಈ ಬಗ್ಗೆ ನಾನು ವೈಯಕ್ತಿಕವಾಗಿ ಹೇಳುವಂಥಾದ್ದು ಏನೆಂದರೆ ಬಿ.ಡಿ.ಓ. ಪೋಸ್ಟ್ ಅನಾವ್ಯಕವೆಂದು ಹೇಳುತ್ತೇನೆ. ಅವರಿಗೆ ಯಾವುದೇ ರೀತಿಯಾದಂತಹ, ವಿಶೇಷವಾದಂತಹ ಕರ್ತವ್ಯಗಳು ಇಲ್ಲದಿರುವುದರಿಂದ ಈ ಹುದ್ದೆಯನ್ನು ಅಬಾ ಲೀಶ್ ಮಾಡುವಂಥಾದ್ದು ಸೂಕ್ತವೆಂದು ನಾನು ಸಲಹೆಯನ್ನು ಕೊಡುತ್ತೇನೆ. ನಾನು ಹೇಳಿದಂತಹ ಸಲಹೆಗಳನ್ನು ಸಮರ್ಗವಾಗಿ ತಿದ್ದುಪಡಿ ಮಾಡಿ ತರಬೇಕಾಗುತ್ತದೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಸರಳವಾದಂತಹ ಮತ್ತು ತಕ್ಷಣ ಸಮಸ್ಯೆಗಳನ್ನು ಪರಿಹರಿಸಲು ತಂದಿರುವಂತಹ ಒಂದು ಸಮದ್ದೇಶದಿಂದ ಕೂಡಿರುವಂತಹ ತಿದ್ದುಪಡಿಯಾಗಿದೆ. ಇದಕ್ಕೆ ಬೇರೆ ಬೇರೆ ಕಾರಣಗಳಿಂದ ಆರೋಪಿಸುವಂತಹ ಅಗತ್ಯವಿಲ್ಲ. ಇಲ್ಲಿ ಬಂದಿರುವಂತಹ ಸಮಸ್ಯೆ ಏನೆಂದರೆ ನಾವು ಇಲ್ಲಿ 20 ತಿಂಗಳ ಅವಧಿಯನ್ನು ನಿರ್ಧಾರ ಮಾಡಿದ್ದೇವೆ. ಪ್ರಾರಂಭದಲ್ಲಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮಾಡುವ ಪೂರ್ವದಲ್ಲಿ ಯಾವ್ಯಾವ ತಾಲ್ಲೂಕುಗಳು, ಯಾವ ಯಾವ ಜಿಲ್ಲೆಗಳು ಯಾವ್ಯಾವ ಜನಾಂಗಗಳಿಗೆ ಹೋಗುತ್ತವೆನ್ನುವ ಮೀಸಲಾತಿಯ ಪ್ರಕಟಣೆಯನ್ನು ನಾವು ಮಾಡಿದ್ದೆವು. ಆಗ

ಚುನಾವಣೆಗಳು ಆಗಿರಲಿಲ್ಲ. ಆದುದರಿಂದ ಆ ಸಮಸ್ಯೆ ಉದ್ಭವವಾಗುವಂತಹ ಪ್ರಶ್ನೆಯೇ ಇಲ್ಲ: ಅಥವಾ ರಾಜಕೀಯ ಕಾರಣಗಳಿಗಾಗಿ ಇಂತಹ ಜಿಲ್ಲೆಯನ್ನು, ಇಂತಹ ತಾಲ್ಲೂಕನ್ನು ನಿರ್ಧರಿಸಿ ನಮ್ಮ ಪಕ್ಷಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ನಿರ್ಣಯವನ್ನು ತೆಗೆದುಕೊಂಡೆವು ಎಂಬ ಪ್ರಶ್ನೆಯೂ ಇಲ್ಲ. ಏಕೆಂದರೆ ಅದು ಭವಿಷ್ಯದಲ್ಲಿ ಆಗಿರುವಂತಹ ಫಲಿತಾಂಶವಾಗಿರುತ್ತದೆ. ಆದುದರಿಂದ ನಾವು ಏನು ಅಂದುಕೊಂಡಿದ್ದೇವೆ, ಅದು ನಿಮಗೂ ಗೊತ್ತಿದೆ. ನೀವು ಎರಡು ಕ್ಷೇತ್ರಗಳಲ್ಲೂ ಬಿ.ಜೆಪಿ. ಪಕ್ಷಕ್ಕೆ ಹೋಗುತ್ತದೆಂದು ನಾವು ಯಾರೂ ಭಾವಿಸಿರಲಿಲ್ಲ. ಆದರೆ ಹೋಯಿತು. ಹಾಗೆ ನಾವು ರಾಮನಗರದಲ್ಲಿ ಸ್ಥಾನವನ್ನು ಕಳೆದುಕೊಳ್ಳುತ್ತೇವೆಂದು ಅಂದುಕೊಂಡಿರಲಿಲ್ಲ. ಆದರೆ ಅಲ್ಲಿ ಕಾಂಗ್ರೆಸ್ ಪಕ್ಷದವರು ಗೆದ್ದರು. ಆದರೆ ಅವರು ಮಾತನಾಡುವಾಗ ರಾಜಕಾರಣವನ್ನು ಬೆರಸಲಿಲ್ಲ. ಆದುದರಿಂದ ತಮಗೆ ಉತ್ತರವನ್ನು ಕೊಡುತ್ತೇನೆ. ಮುಂದಿನ ಪ್ರಶ್ನೆ ಏನಾಗುತ್ತದೆನ್ನುವಂತಹ ವಿಚಾರವನ್ನು ನಾವು ಪ್ರಕಟಣೆ ಮಾಡಿರಲಿಲ್ಲ. ಇದು ಐದು ವರ್ಷಗಳ ಅವಧಿ ಇತ್ತು ಎನ್ನುವುದು ಸದನದಲ್ಲಿ ಎಲ್ಲರಿಗೂ ಗೊತ್ತಿದ್ದು ಮತ್ತೆ ಅವರು ವಿವೇಕದಿಂದ ಇದನ್ನು 20ತಿಂಗಳಿಗೆ ಇಳಿಸಬೇಕೆನ್ನುವಂಥ ಪ್ರಸ್ತಾವ ಬಂದಾಗ 20 ತಿಂಗಳಿಗೆ ಮಾಡಿದೆವು. ಶಾಸಕಾಂಗದಲ್ಲಿ ಈ ರೀತಿಯಾಗಿ ಪೂರ್ವಾನ್ವಯದಿಂದ ಈ ಅಧಿಕಾರವನ್ನು ಮೊಟಕುಗೊಳಿಸುವುದಕ್ಕೆ ಸಾಧ್ಯವಾಗುತ್ತದೆನ್ನುವಂತಹ ವಿಚಾರವನ್ನು ನ್ಯಾಯಾಂಗದಲ್ಲಿ ಕೆಲವರು ಪ್ರಶ್ನೆ ಮಾಡಿದ್ದರಿಂದ ಮತ್ತು ನ್ಯಾಯಾಂಗದ ತೀರ್ಪು ಸ್ವಲ್ಪಮಟ್ಟಿಗೆ ತಡವಾಗಿ ಬಂದಿರುವುದರಿಂದ, ಈಗ ನಾವು ಮಾಡಿರುವಂತಹ ತೀರ್ಮಾನ ಅಂತರ್ಗತವಾಗಿ ಶಾಸಕಾಂಗಕ್ಕೆ ಈ ರೀತಿಯ ಅಧಿಕಾರವಿದೆ ಎನ್ನುವಂತಹ ಸಿಂಧುತ್ವವನ್ನು ಎತ್ತಿ ಹಿಡಿದುದ್ದರಿಂದ ಈ ನಾವು ಅವರನ್ನು ಅಧ್ಯಕ್ಷರಲ್ಲವೆಂದು ಮಾಡಿದ್ದೇವೆ. ಇದನ್ನು ಕಾಂಗ್ರೆಸ್ ಪಕ್ಷದ ಉಪ ನಾಯಕರು ಪ್ರಸ್ತಾಪ ಮಾಡಿದ್ದರೂ. ಈ ವಿಷಯವನ್ನು ಮೌಖಿಕವಾಗಿ ಎಲ್ಲರಿಗೂ ಕೂಡ 20 ತಿಂಗಳುಗಳ ಅವಧಿ ಮುಕ್ತಾಯವಾಗಿರುವುದರಿಂದ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ, ತಾಲ್ಲೂಕು ಪಂಚಾಯತ್ ಅಥವಾ ಜಿಲ್ಲಾ ಪಂಚಾಯತ್‌ನಲ್ಲಿ ತಾವು ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಅವರು ಕರ್ತವ್ಯ ನಿರ್ವಹಿಸಬಾರದೆನ್ನುವಂತಹ ವಿಷಯವನ್ನು ಅವರಿಗೆ ತಿಳಿಸಿದ್ದೇವೆಯೇವಿನ: ಅವರಿಗೆ ತೊಂದರೆ ಕೊಡಲಿಲ್ಲ. ತಮಗೆ ಗೊತ್ತಿರುವಂತೆ ಅನೇಕ ಕಡೆಗಳಲ್ಲಿ ಅವರು ಕಛೇರಿಗಳಲ್ಲಿ ಕುಳಿತುಕೊಳ್ಳಬೇಕು ಮತ್ತು ಚೀಪನ್ನು ಉಪಯೋಗಿಸಬೇಕು ಮತ್ತು ಸಭೆಗಳನ್ನು ನಡೆಸಬೇಕೆಂಬ ಇರಾದೆ ಕೂಡ ಇತ್ತು. ನಾವು ಅವರಿಗೆ ಸ್ಪಷ್ಟೀಕರಣವನ್ನು ಕೊಟ್ಟೆವು. ಈ ರೀತಿಯಾಗಿ ನಾವು ಅದರ ಸಿಂಧುತ್ವವನ್ನು ಎತ್ತಿ ಹಿಡಿದ ಮೇಲೆ ತಮ್ಮ ಅಧಿಕಾರ ಮುಕ್ತಾಯವಾಗಿದೆ. ಆದುದರಿಂದ ದಯಮಾಡಿ ಇದನ್ನು ಮಾಡಬಾರದೆಂದು ಅತ್ಯಂತ ವಿನಯ ಪೂರ್ವಕವಾಗಿ, ಗೌರವದಿಂದ ಮೌಖಿಕವಾಗಿ ಈ ವಿಷಯವನ್ನು ತಿಳಿಸಿದ್ದೇವೆ.

ಶ್ರೀ ವೈ.ರಾಮಕೃಷ್ಣ:- ತಮ್ಮ ಉದ್ದೇಶ ನೆರವೇರಬೇಕಾಗದರೆ ಮೊದಲ ಸಲ ನೀವು ಆಫೀಸರ್ಸ್‌ಗಳನ್ನು, ವಿಭಾಗಾಧಿಕಾರಿಗಳನ್ನು ಮತ್ತು ಆಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಕ ಮಾಡಿದ್ದೀರಿ. ಇನ್ನು ಮುಂದೆ ಔಟ್ ಗೋಯಿಂಗ್ ಪ್ರೆಸಿಡೆಂಟ್‌ಗಳು ಯಾರು ಇದ್ದಾರೆ, ಅವರು ಇನ ಕಮಿಂಗ್ ಪ್ರೆಸಿಡೆಂಟ್ ಎಲೆಕ್ಷನ್‌ಗೆ ಹೋಗಬಹುದೆಂದು ಮತ್ತೊಂದು ಅಮೆಂಡ್‌ಮೆಂಟ್ ಅನ್ನು ಅದರಲ್ಲಿ ತರಬಹುದಾಗಿತಲ್ಲಾ, ಇದನ್ನು ಸಹ ತಾವು ಯೋಚನೆ ಮಾಡಿ ನೋಡಿ.

ಇದರಿಂದ ತಾವು ಡೆಮಾಕ್ರಸಿ ಪ್ರಿನ್ಸಿಪಲ್ ಅನ್ನು ಎತ್ತಿ ಹಿಡಿದ ಹಾಗೆ ಆಗುತ್ತಿತ್ತು. ಅದನ್ನು ತಾವು ಕೈ ಬಿಟ್ಟಿರಿ: ಅಧಿಕಾರಿಗಳನ್ನು ಮಾತ್ರ ಹಾಕಿದ್ದೀರಿ. So. it is incomplete amendment. You have to bring complete amendment.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಉಪಾಧ್ಯಕ್ಷರೆ, ಈ ವಾದ ವಿವಾದಗಳನ್ನು ಕೇಳಿದರೆ ಸ್ವಲ್ಪಮಟ್ಟಿಗೆ ಸತ್ಯಾಂಶವಿರಬಹುದು, ನಾಪೇಕ್ಷವಿರುತ್ತದೆ. ನಾವು ಈಗ ಅದೇ ವಾದವನ್ನು ತಾರ್ಕಿಕವಾಗಿ ಮುಂದುವರೆಸಿಕೊಂಡು ಹೋದರೆ ಒಂದೂವರೆ ಲಕ್ಷದಿಂದ ಎರಡು ಲಕ್ಷ ಪ್ರತಿನಿಧಿಗಳನ್ನು ಆಯ್ಕೆ ಮಾಡುವಂತಹ ವಿಧಾನಸಭಾ ಸದಸ್ಯನ ಅಥವಾ ಲೋಕಸಭಾ ಸದಸ್ಯನ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಏಕೆ ಆಗಿರಬಾರದು; ಅಥವಾ ಉಪ ಆಯುಕ್ತ ಏಕೆ ಆಗಿರಬಾರದು ಎಂಬ ಪ್ರಶ್ನೆ ಬರುತ್ತದೆ ಅದೂ ಕೂಡ ಒಬ್ಬ ರಾಜಕೀಯ ಮನುಷ್ಯನ ಮೂಲಕ ಮಾಡಬಹುದಲ್ಲಾ ಎಂದು ತಾರ್ಕಿಕವಾಗಿ ಅದನ್ನು ಮುಂದುವರೆಸಬಹುದು. ಹಾಗಾಗಿ ಇಲ್ಲಿ ನಿರ್ದಿಷ್ಟವಾದಂತಹ ಆಕೌಂಟ್‌ಬಲಿಟಿ ಇದೆ. ಆ ಅಧಿಕಾರಿಗಳು ಜವಾಬ್ದಾರಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿರುವುದಿರಂದ, ಅವರು ಆ ಕರ್ತವ್ಯವನ್ನು ನಿರ್ವಹಿಸುವಲ್ಲಿ ಏನಾದರೂ ಲೋಪದೋಷಗಳಾಯಿತು ಅಂದರೆ ಅವರ ಮೇಲೆ ಸಂಪೂರ್ಣವಾಗಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸಾಧ್ಯತೆಗಳಿರುವುದರಿಂದ ಈ ರೀತಿಯಾದಂತಹ ಚುನಾವಣಾಧಿಕಾರಿಯನ್ನು ಅಷ್ಟೆಕ್ಕೆ ಮಾತ್ರ ಸೀಮಿತಗೊಳಿಸುವಂತಹ ಅಧಿಕಾರಿಗಳನ್ನು ನೇಮಿಸಿಕೊಳ್ಳುವಂಥಾದಕ್ಕೆ ಒಂದು ಸಣ್ಣ ತಿದ್ದುಪಡಿಯಾಗಿದೆ. ಎರಡನೆಯದಾಗಿ ಮಾನ್ಯ ವಿರೋಧಪಕ್ಷದ ನಾಯಕರು ಈ ವಿಚಾರದಲ್ಲಿ ಕಾಯಿದೆ ಇಲ್ಲದಿದ್ದರೆ ಮತ್ತು ನಿಯಮಾವಳಿಗಳು ಇಲ್ಲದಿದ್ದರೆ ಏನಾದರೂ ತಪ್ಪಾಗಬಹುದು ಎಂದು ಹೇಳಿದರು. ಇದು ನೇರವಾಗಿ ಸಂಬಂಧವಿಲ್ಲದೇ ಇದ್ದರೂ ಕೂಡ ಸದನದ ಅವಗಾಹನೆಗೆ ತರುತ್ತೇನೆ. ಈ ನಿಯಮಾವಳಿಯನ್ನು ದಿ:17-2-95 ರಂದು ರಚಿಸಲಾಗಿದೆ. ಈ ನಿಯಮಾವಳಿಯ ಪ್ರಕಾರ ಪ್ರಥಮವಾಗಿ ಅಲ್ಲಿರತಕ್ಕಂಥ ಪರಿಶಿಷ್ಟ ಪಂಗಡಕ್ಕೆ, ಅವರ ಜನಸಂಖ್ಯೆಯ ಶೇಕಡವಾರಿನ ಮೇಲೆ ಮೊದಲು ಪರಿಶಿಷ್ಟ ಜಾತಿಯವರಿಗೆ ಕೊಟ್ಟು ನಂತರ ಪರಿಶಿಷ್ಟ ಪಂಗಡದವರಿಗೆ ಕೊಡಬೇಕೆಂದು ನಂತರ ಹಿಂದುಳಿದ ಜನಾಂಗದವರಿಗೆ, ನಂತರ ಹೆಣ್ಣುಮಕ್ಕಳಿಗೆ ನಂತರ ಸಮಾನ್ಯ ವರ್ಗದವರಿಗೆ ಕೊಡಬೇಕೆಂಬ ನಿಯಮಾವಳಿ ಇದೆ. ನಾವು ಈ ನಿಯಮಾವಳಿಯ ಪ್ರಕಾರವೇ ಮಾಡುತ್ತಿರುವುದು.

The Offices of the Adhyaksha and Upadhyaksha reserved for the Scheduled Tribe shallbe allotted by the Government to the Zilla Panchayats having the highest Percentage of population belonging to Scheduled Tribe with reference to the total Population of the district. The same procedure shallbe followed by the Government for allotting the Zilla Panchayats for the same number of offices of Upadhyaksha for the members belonging to the Scheduled Tribes but excluding the Zilla Panchayats in which the offices of the Adhyaksha has been already allotted to them.

The offices of Adhyaksha and Upadhyaksha of the Zilla Panchayat in State shall be allotted by the Government for the members belonging to the Scheduled Caste in the Samemanner as prescribed in clause (a) a bove.

Then, the offices of Adhyaksha and Upadhyaksha of the Zilla Panchayats reserved for the Backward Classes and those of the unreserved category shall be allotted by the Government taking into consideration such factors as the Government may deem fit.

Thereafter, the Offices of the Adhyaksha and Upadhyasha reserved for women in each category referred in Sub-rule (1) shall be allotted by the Government to the Zilla Panchayats taking into consideration such factors."

ಶ್ರೀ ಮಲ್ಲಿಕಾರ್ಜುನ ಖರ್ಗೆ:- ತೊಂದರೆ ಮತ್ತೆ ನಮಗೆ ಅಲ್ಲೆ ಬರುತ್ತದೆಯೋ ಏನೋ

ಶ್ರೀ ಎಂ.ಪಿ. ಪ್ರಕಾಶ್:- ತಾವೇ ಅಧಿಕಾರದಲ್ಲಿದ್ದರೂ ಕೂಡ ಅನಿವಾರ್ಯವಾದಂತಹ ಸಂದಿಗ್ಧ ಪರಿಸ್ಥಿತಿ ಬರುತ್ತಾ ಇತ್ತು. ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಗಣತಿಯಲ್ಲಿ ಅವರ ಜನಸಂಖ್ಯೆ ಎಷ್ಟು ಎಂಬುದು ಗೊತ್ತಾಗುತ್ತದೆ. ಅವರ ಜನಸಂಖ್ಯೆ ಎಷ್ಟು ಇದೆ ಎಂಬುದು ನಮಗೆ ಗೊತ್ತಿದೆ. ಆದರೆ ಹಿಂದುಳಿದ ಜನಾಂಗಕ್ಕೆ ಸಂಬಂಧಿಸಿದಂತೆ ಮತ್ತು ಬೇರೆ ವರ್ಗಗಳಿಗೆ ಸಂಬಂಧಿಸಿದಂತೆ ಜನಸಂಖ್ಯೆಯ ಆಧಾರವಿಲ್ಲದೆ ಇರುವಂತಹ ಸಂದರ್ಭದಲ್ಲಿ ಉಳಿದ ಎಲ್ಲಾ ವಿಚಾರಗಳನ್ನು ನೋಡಬಹುದು. ಈ ಸಂದರ್ಭದಲ್ಲಿ ನಿಯಮದ ಪ್ರಕಾರವಾಗಿ ನಾವು ಯೋಚನೆ ಮಾಡುತ್ತೇವೆ. ಅದೇ ಪ್ರಕಾರವಾಗಿ ನಿಯಮಾಳಿಯ ಅನುಗುಣವಾಗಿ ದಿನಾಂಕ:17-2-95ರಂದು ನೋಟಿಫೀಕೇಷನ್ ಅನ್ನು ನಾವು ಪ್ರಕಟಣೆ ಮಾಡಿದ್ದೇವೆ. ಈಗ ಉದಾಹರಣೆಗೆ ಕ್ಯಾಟಗರಿ ಬಿಗೆ ಸಂಬಂಧಪಟ್ಟಂತೆ, ಅದು ಆರುವರೆ ಪರ್ಸೆಂಟ್ 1 ಮಾತ್ರ ಬರುವುದರಿಂದ ಕೇವಲ ಹನ್ನೇರಡು ಜಿಲ್ಲೆಗಳಿಗೆ ಮಾತ್ರ ನಾವು ಬಿ ಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಹನ್ನೇರಡು ಜಿಲ್ಲೆಯಲ್ಲಿ ನಾಲ್ಕು ಜನ ಮಹಿಳೆಯರಿಗೆ ಕಡ್ಡಾಯವಾಗಿ ಕೊಡಲೇಬೇಕಾಗುತ್ತದೆ. ಈ ಇನ್ನೊಂದು ಜಿಲ್ಲೆಯಲ್ಲಿ ಅಯ್ಕೆಯಾಗಿ ಬಂದಿದ್ದರು ಕೂಡ ಅದು ಹನ್ನೆರಡಕ್ಕೆ ಮಾತ್ರ ಸೀಮಿತವಾಗುವುದರಿಂದ ಕೇವಲ ಎಂಟು ಜಿಲ್ಲೆಗಳಲ್ಲಿ ಬಿ ಇದ್ದಾಗಲೂ ಕೂಡ ಅವರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದರಲ್ಲಿ ಯಾವುದಕ್ಕೆ ಹೆಣ್ಣು ಮಕ್ಕಳನ್ನು ಸೂಚಿಸಬೇಕೆನ್ನುವುದನ್ನು ಜಿಲ್ಲಾ ವಿಚಾರದಲ್ಲಿಯೂ ಕೂಡ ನಾವು ಆ ಬ್ರಾಕೇಟ್‌ನಲ್ಲಿ ಹೇಳಿದ್ದೇವೆ. ಈಗ ಉದಾಹರಣೆಗೆ ಹೇಳುವುದಾದರೆ, ಹಾಸನದಲ್ಲಿ ಬಿ ಕ್ಯಾಟಗರಿಗೆ ಒಂದಿದ್ದರೆ ಅದು ಹೆಣ್ಣುಮಕ್ಕಳಿಗೇ ಹೋಗುತ್ತದೆ, ಬೆಳಗಾವಿಯಲ್ಲಿ ಬಿ ಕ್ಯಾಟಗರಿಯಲ್ಲಿ ಒಂದಿದ್ದರೆ ಅದು ಹೆಣ್ಣುಮಕ್ಕಳಿಗೇ ಹೋಗುತ್ತದೆ, ಬಳ್ಳಾರಿಯಲ್ಲಿ ಬಿ ಕ್ಯಾಟಗರಿಯಲ್ಲಿ ಒಂದಿದ್ದರೆ ಅದು ಹೆಣ್ಣುಮಕ್ಕಳಿಗೇ ಹೋಗುತ್ತದೆ. ಕೊಡಗಿನಲ್ಲಿ ಬಿ ಕ್ಯಾಟಗರಿಯಲ್ಲಿ ಒಂದಿದ್ದರೆ ಅದು

ಹೆಣ್ಣುಮಕ್ಕಳಿಗೇ ಹೋಗುತ್ತದೆ. ಇದು ಮೊದಲೇ 17.2.1995ರಲ್ಲಿ ಆಗಿರತಕ್ಕಂಥ ನೋಟಿಫಿಕೇಷನ್. ತಾವು ಇದ್ಯಾವುದನ್ನೂ ನೋಡದೆ ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ವಿನಾಕಾರಣವಾಗಿ ರಾಜಕೀಯ ವಿಚಾರಗಳನ್ನು ತಾವು ದಯಮಾಡಿ ಮಾಡಬಾರದೆಂದು ಹಿರಿಯ ಸದಸ್ಯರಲ್ಲಿ ನಾನು ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ. ಈ ಎರಡೂ ಬಹಳ ಚಿಕ್ಕದಾದಂಥ ಸರಳವಾದಂಥ ಮತ್ತು ಅಗತ್ಯಕ್ಕೆ ಅನುಗುಣವಾದಂತೆ, ಇಲ್ಲಿ ತಾವು ಹೇಳಿದಂತೆ ಅನೇಕ ವಿಷಯಗಳ ಬಗ್ಗೆ ನಾವು ತಿದ್ದುಪಡಿಗಳನ್ನು ತರಬೇಕಾಗಿದೆ, ನಾಯಕ್ ಸಮಿತಿಯ ವರದಿಯನ್ನು ನಮ್ಮ ಎಲ್ಲಾ ಶಾಸಕ ಮಿತ್ರರಿಗೂ ಕಳುಹಿಸಿಕೊಟ್ಟಿದ್ದೇನೆ, ಇವತ್ತಿನವರೆಗೆ ಒಬ್ಬ ಶಾಸಕರೂ ಕೂಡ ನನಗೆ ಪತ್ರವನ್ನು ಬರೆದಿಲ್ಲ. ಈಗ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಎರಡೂ ಸಾರಿಯು ಕೂಡ ನಮ್ಮ ಸಭಾಂಗಣದಲ್ಲಿ ಚರ್ಚೆ ನಡೆದಿದೆ. ಇದನ್ನು ನೋಡಿಕೊಂಡು ಮುಂದಿನ ಅಧಿವೇಶನದಲ್ಲಿ ಸಮಗ್ರವಾಗಿರುವ ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ; ದಯವಿಟ್ಟು ಸದನ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು" ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6 ರವರೆಗೆ

ಅಧ್ಯಕ್ಷರು:- "ಖಂಡ 2 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ.

"ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತ್ತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್:- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ಕರಾರು ವಾಹನಗಳ (ಅರ್ಜನೆ) (ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಮಂತ್ರಿಗಳು):- ಈ ಒಂದು ತಿದ್ದುಪಡಿಯನ್ನು ತಂದಿರುವ ಉದ್ದೇಶ, ರಾಜ್ಯದಲ್ಲಿ 1976ರ ಮೋಟಾರ್ ವಾಹನ ಕಾಯಿದೆಗೆ ತಿದ್ದುಪಡಿಯನ್ನು ತಂದ ನಂತರ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗಬೇಕಾದರೆ ಅಥವಾ ಮದುವೆ ಇತ್ಯಾದಿ ಕಾರ್ಯಕ್ರಮಗಳಿಗೆ ಜನರನ್ನು ಕರೆದುಕೊಂಡು ಹೋಗಬೇಕಾದರೆ ಸಾರಿಗೆ ಸಂಸ್ಥೆ ಎಂದರೆ ಕೆಎಸ್‌ಆರ್‌ಟಿಸಿ ಯವರು ಮಾತ್ರ ಪರ್ಮಿಟ್‌ಗಳನ್ನು ಕೊಡುವುದಕ್ಕೆ ಅವಕಾಶವಿತ್ತೇ ಹೊರತು ಮತ್ತೆ ಯಾರಿಗೂ ಕೂಡ ಅವಕಾಶವಿರಲಿಲ್ಲ. ಈಗ ನಮಗೆ ಗೊತ್ತಿರುವ ಹಾಗೆ ಸಾರಿಗೆ ಸಂಸ್ಥೆಯಲ್ಲಿ ರಾಷ್ಟ್ರೀಕರಣವಾಗಿರುವ ಪ್ರದೇಶದಲ್ಲಿ ಇದರ ತೊಂದರೆಯಾಗುವುದಿಲ್ಲ. ಆದರೆ ರಾಷ್ಟ್ರೀಕರಣವಾಗದೇ ಇರುವ ಪ್ರದೇಶವೇನಿದೆ ಅಲ್ಲಿ ಖಾಸಗಿ ವಾಹನಗಳು ಇವೆ. ಅವರಿಗೆ ಪರ್ಮಿಟ್ ಅನ್ನು, ಮದುವೆಗಳಿಗೆ ಇರಬಹುದು ಅಥವಾ ಎಸ್‌ಕರ್ಶನ್‌ಗೆ ಇರಬಹುದು ಈ ರೀತಿ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿರಲಿಲ್ಲ. ಈ ಅವಕಾಶವನ್ನು ಮಾಡಿಕೊಡ ಬೇಕೆನ್ನುವ ಉದ್ದೇಶದಿಂದಾಗಿ ಈ ತಿದ್ದುಪಡಿಯನ್ನು ನಾವು ತೆಗೆದುಕೊಂಡು ಬಂದಿದ್ದೇವೆ. ಈಗ ಇದರಿಂದ ಏನಾಗುತ್ತಿದೆ ಎಂದರೆ, ಬೇರೆ ರಾಜ್ಯಗಳಲ್ಲಿ ಇದನ್ನು ಕೊಡುತ್ತಿದ್ದಾರೆ. ಉದಾಹರಣೆಗೆ, ಆಂಧ್ರಪ್ರದೇಶ ರಾಜ್ಯದಲ್ಲಿ ಹಾಗೂ ಪಕ್ಕದ ತಮಿಳುನಾಡು ರಾಜ್ಯದಲ್ಲಿ ಇದನ್ನು ಕೊಡುತ್ತಿದ್ದಾರೆ. ನಮ್ಮ ಬಸ್ ಮಾಲಿಕರು ಅಲ್ಲಿಗೆ ಹೋಗಿ ಪರ್ಮಿಟ್‌ಗಳನ್ನು ತೆಗೆದುಕೊಂಡು ಬಂದು ಇಲ್ಲಿ ಆ ಪರ್ಮಿಟ್‌ನಲ್ಲಿ ಹೋಗುತ್ತಾರೆ, ಅದನ್ನು ನಾವು ತಡೆಯುವುದಕ್ಕಾಗುವುದಿಲ್ಲ. ಇದನ್ನು ಮಾಡುವುದರಿಂದಾಗಿ ಸ್ಟೇಟ್ ಎಕ್ಸ್‌ಚೆಕರ್‌ಗೆ ಐದರಿಂದ ಆರು ಕೋಟಿ ರೂಪಾಯಿಗಳ ಹಣ ಬರಬಹುದೆನ್ನುವ ಒಂದು ಅಂದಾಜನ್ನು ಕೂಡ ಮಾಡಿಕೊಂಡಿದ್ದೇವೆ. ಮತ್ತೆ, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಈ ಒಂದು ತಿದ್ದುಪಡಿಯನ್ನು